ಕಾಯಕವೇ ಕೈಲಾಸ



# ಸಿದ್ಧಗಂಗಾ



ಸಂಪುಟ : ೬೨ ಜುಲೈ ೨೦೨೬ ಸಂಚಿಕೆ : ೦೭



ಜೂನ್ ೩ ರಂದು, ನೂತನ ಮುಖ್ಯಮಂತ್ರಿಯಾಗಿ ಶ್ರೀ ಡಿ.ಕೆ.ಶಿವಕುಮಾರ್ ಹಾಗೂ
ಉಪ ಮುಖ್ಯಮಂತ್ರಿಯಾಗಿ ಡಾ.ಜಿ.ಪರಮೇಶ್ವರ್ ಅವರು ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ
ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರಚಂದ್ ಗೆಹ್ಲೋತ್ ಅವರಿಂದ ಪ್ರತಿಜ್ಞಾ ವಿಧಿ ಸ್ವೀಕರಿಸಿದರು



ಕರ್ನಾಟಕದ ನೂತನ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಾ.ಜಿ.ಪರಮೇಶ್ವರ್ ಅವರು ಶ್ರೀಮಠಕ್ಕೆ ಆಗಮಿಸಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರ ಗದ್ದುಗೆ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ನಂತರ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಾಶೀರ್ವಾದ ಪಡೆದರು.



ಶ್ರೀ ದೇಗುಲಮಠದ ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ದಿವ್ಯ ಶಿವಚರಣಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು

ತುಮಕೂರು ನಗರದಲ್ಲಿ ನೂತನವಾಗಿ ನಿರ್ಮಿಸಿರುವ
ಅತ್ಯಾಧುನಿಕ ಸೌಕರ್ಯಗಳನ್ನೊಳಗೊಂಡ ವಸತಿಗೃಹ

# ಹೋಟೆಲ್ ಶ್ರೀ ವಿಘ್ನೇಶ್ವರ ಕಂಫರ್ಟ್

ಸರ್ಕಾರಿ ಕಾಲೇಜು ಮುಂಭಾಗ, ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2255883, 2257770, 2257774, 2257772 ಫ್ಯಾಕ್ಸ್ : 2255873



- ಮೂರು ವಿವಿಧ ದರ್ಜೆಯ 50 ಸುಸಜ್ಜಿತ ಕೊಠಡಿಗಳು
- ವಿಶೇಷ ವ್ಯವಸ್ಥೆಯ ಹವಾನಿಯಂತ್ರಿತ ಕೊಠಡಿಗಳು
- ಹವಾನಿಯಂತ್ರಿತ ಮಿನಿ ಕಾನ್ಫರೆನ್ಸ್ ಹಾಲ್
- ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ
- ಪ್ರತಿ ಕೊಠಡಿಗೆ ಟಿ.ವಿ., ಟೆಲಿಫೋನ್ ಸಂಪರ್ಕ
- ಹವಾನಿಯಂತ್ರಿತ ವಿ.ಐ.ಪಿ. ರೂಂ.
- ಶಾಶ್ವತ ವಿದ್ಯುತ್ ವ್ಯವಸ್ಥೆ
- ಪರಿಣತ ಸಿಬ್ಬಂದಿಯ ವಿನೀತ ಸೇವೆ

**ಲಿಫ್ಟ್ ಸೌಲಭ್ಯವಿದೆ**

**ಹವಾನಿಯಂತ್ರಿತ ಉಪಹಾರ ಗೃಹ**

ಮಾಲೀಕರು : ಎಸ್.ಜಿ. ಚಂದ್ರಮೌಳಿ, ಗ್ರಾನೈಟ್ ಉದ್ಯಮಿ








## ಅಂತರಂಗ



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥
ಆವಾವ ಕಾಯಕವ ಮಾಡಿದರು ಬಸವೇಶ
ಆವಗಂ ಶರಣರನು ಸೇವಿಪೆನು ಬಸವೇಶ



# ಸಿದ್ಧಗಂಗಾ

ಸಂಪುಟ : ೬೨ ಜುಲೈ ೨೦೨೬ ಸಂಚಿಕೆ : ೦೬

ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು
ಸಂಸ್ಥಾಪಕ ಅಧ್ಯಕ್ಷರು

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ಅಧ್ಯಕ್ಷರು

ಪ್ರಧಾನ ಸಂಪಾದಕರು :
ಹೆಚ್.ವಿ. ವೀರಭದ್ರಯ್ಯ
ಸಂಪಾದಕರು :
ಎಚ್.ಎಸ್. ಸಿದ್ಧಗಂಗಪ್ಪ

ಪ್ರಕಾಶಕರು :
ಕೆ.ಬಿ. ಶಿವಶಂಕರಯ್ಯ
ಮೊ : 91410 36345

ಪತ್ರಿಕಾ ನಿರ್ವಹಣಾ ಸಮಿತಿ :
ಎಂ. ರೇಣುಕಾರಾಧ್ಯ
ಎನ್.ವಿ. ಸತೀಶ್‌ಕುಮಾರ್
ಹೆಚ್.ಎನ್.ಉಮಾಶಂಕರ್

ಪ್ರಕಾಶನ :
ಹಳೆಯ ವಿದ್ಯಾರ್ಥಿಗಳ ಸಂಘ
ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ–೫೭೨ ೧೦೪.

ಮುದ್ರಕರು :
ಗೀತಾಂಜಲಿ ಗ್ರಾಫಿಕ್ಸ್
ಬಿ–೭೧, ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕನಗರ
ರಾಜಾಜಿನಗರ, ಬೆಂಗಳೂರು–೫೬೦ ೦೧೦

ವಿಳಾಸ :
"ಸಂಪಾದಕರು"
'ಸಿದ್ಧಗಂಗಾ' ಮಾಸಪತ್ರಿಕೆ, ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ–572 104 ದೂ: 0816–2282322.

## ಒಳಪುಟಗಳಲ್ಲಿ ...................

೧ ಸಂಪಾದಕೀಯ

೨ ಶ್ರೀವಾಣಿ

೪ ಸಿದ್ಧಲಿಂಗೇಶ್ವರ ವಚನ – ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

೫ ವೈರಾಗ್ಯನಿಧಿ, ಮಾತೃಹೃದಯಿ, ದೇಗುಲಮಠದ ಕೀರ್ತಿ ಕಳಸ ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಶಿವನಲ್ಲಿ ಲೀನ – **ಎಚ್.ಎಸ್.ಸಿದ್ಧಗಂಗಪ್ಪ**

೧೦ **ಹೈಕೋರ್ಟ್ ತೀರ್ಪು** –
೧೪ ಎಕರೆ ಜಮೀನು ಸಿದ್ಧಗಂಗಾ ಮಠಕ್ಕೆ : ಹೈಕೋರ್ಟ್ ಅಸ್ತು

೧೧ 'ನಾಡೋಜ' ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾದ ಹಿರಿಯ ವಿದ್ವಾಂಸ, ಸಂಶೋಧಕ ಪ್ರೊ.ಸಿ.ಮಹಾದೇವಪ್ಪ
– **ಪ್ರಕಾಶ ಗಿರಿಮಲ್ಲನವರ, ಬೆಳಗಾವಿ**

೧೫ **ಅಭಿನಂದನೆ** – ಪ್ರೋ ಬಿ.ಗಂಗಾಧರಯ್ಯ ಅವರಿಗೆ ಅಭಿನಂದನೆ – ಸಾರ್ಥಕ ಸೇವೆಗೆ ಸಂದ ಗೌರವ

೧೮ **ಚಿಂತನೆ** – ಮನಸ್ಸು – **ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು**

೧೯ **ವರದಿ** – ರಾಜ್ಯಮಟ್ಟದ NMMS ವಿದ್ಯಾರ್ಥಿ ವೇತನಕ್ಕೆ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಶಿವನಹಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಆಯ್ಕೆ

೨೧ **ಕ್ಷೇತ್ರವಾರ್ತೆ** – ಶಿವತತ್ತ್ವ ಚಿಂತನಾಗೋಷ್ಠಿ–೫೫

೨೨ **ದಾನಿಗಳ ಪಟ್ಟಿ** – ಶ್ರೀ ಸಿದ್ಧಗಂಗಾ ಗುರುಕುಲ ಡೆವಲಪ್‌ಮೆಂಟ್ ಟ್ರಸ್ಟ್‌ಗೆ ದೇಣಿಗೆ ನೀಡಿದ ದಾನಿಗಳ ಪಟ್ಟಿ

| ಚಂದಾ ವಿವರ | ದಶವಾರ್ಷಿಕ ಸದಸ್ಯತ್ವ ರೂ. 2500/–<br>ವಾರ್ಷಿಕ ಚಂದಾ ರೂ. 250.00 ಬಿಡಿ ಪ್ರತಿ ರೂ. 20.00 |
|---|---|

email: siddaganganews@gmail.com

ಲೇಖಕರ ಅಭಿಪ್ರಾಯಗಳು ಪತ್ರಿಕೆಯ ಅಭಿಪ್ರಾಯಗಳಲ್ಲ







# ಸಂಪಾದಕೀಯ........

ನಮ್ಮೆಲ್ಲರ ಆರಾಧ್ಯದೈವ, ನಡೆದಾಡುವ ದೇವರಾಗಿದ್ದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ವಿದ್ಯೆಗೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ವಿದ್ಯಾವಂತರಾಗಬೇಕೆಂದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶ್ರೀಮಠದಲ್ಲಿ ಆಶ್ರಯ ನೀಡಿ ವಿದ್ಯಾವಂತರಾಗುವಂತೆ ಮಾಡುತ್ತಿದ್ದರು. ಪ್ರತಿದಿನ ನಡೆಯುವ ಪ್ರಾರ್ಥನಾ ಸಭೆಯಲ್ಲಿ ಮಕ್ಕಳಿಗೆ ತಮ್ಮ ಶಿವನುಡಿಗಳ ಮೂಲಕ ವಿದ್ಯೆಯ ಮಹತ್ವವನ್ನು ಮನಮುಟ್ಟುವಂತೆ ಹೇಳುತ್ತಿದ್ದರು. “ಜ್ಞಾನಾರ್ಜನೆ ಜೀವನದಲ್ಲಿ ಮುಖ್ಯವಾದ ತತ್ತ್ವ, ಧ್ಯೇಯ ಗುರಿಯಾಗಬೇಕು. ಜೀವನ ಸಾರ್ಥಕವಾಗಬೇಕಾದರೆ ಜ್ಞಾನವೇ ಮುಖ್ಯವಾದ ಸಾಧನವಾದ್ದರಿಂದ, ಆ ಜ್ಞಾನವನ್ನು ಸಂಪಾದನೆ ಮಾಡುವ ಬಹುಮುಖ್ಯ ಕಾಲ ಬಾಲ್ಯಾವಸ್ಥೆ. ವಿದ್ಯಾರ್ಥಿಗಳ ಮುಖ್ಯವಾದ ಗುರಿ ಜ್ಞಾನಾರ್ಜನೆ ಮಾಡುವುದು, ಜಡತ್ವ ಹೋಗಬೇಕು, ಆಲಸ್ಯ ಹೋಗಬೇಕು, ಅಜ್ಞಾನ ದೂರವಾಗಬೇಕು. ದಿನ ದಿನವೂ ಒಳ್ಳೆಯ ಮಾತು, ಒಳ್ಳೆಯ ವಿಚಾರದ ಕಡೆಗೆ ಮನಸ್ಸನ್ನು ಹರಿಸುವ ಪ್ರಯತ್ನ ಮಾಡಬೇಕು” ಎಂದು ಹೇಳುವುದರ ಮೂಲಕ ವಿದ್ಯೆಯನ್ನು ಗಳಿಸಲು ಪ್ರೇರೇಪಿಸುತ್ತಿದ್ದರು.

ಜವಾಹರಲಾಲ್ ನೆಹರು ಅವರು ಒಂದು ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟಾಗ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಒಂದು ದೇಶಕ್ಕೆ ವಿಶ್ವವಿದ್ಯಾಲಯಗಳು ಏಕೆ ಬೇಕು? ಎನ್ನುವ ಪ್ರಶ್ನೆಯನ್ನು ಕೇಳಿಕೊಂಡು, ಅವರೇ ಉತ್ತರ ಕೊಟ್ಟರು. ಸಾಮಾನ್ಯವಾಗಿ ಈ ಪ್ರಶ್ನೆಗೆ ಕೊಡುವ ಉತ್ತರಗಳನ್ನು ಅವರು ಕೊಡಲಿಲ್ಲ. ಅವರು ಕೊಟ್ಟ ಉತ್ತರ ಬಹುಕುತೂಹಲಕಾರಿಯಾಗಿತ್ತು. ಅವರೆಂದರು “ಒಂದು ದೇಶದಲ್ಲಿ ಯಾವುದೇ ಮುಖ್ಯವಾದ ವಿಷಯವನ್ನು ಆದೇಶವಿಲ್ಲದೆ ಒಂದು ಪಕ್ಷ ಅಥವಾ ಗುಂಪಿಗೆ ನಿಷ್ಠೆ ಇಲ್ಲದೆ ಚರ್ಚೆ ಮಾಡುವ ಅವಕಾಶವಿರಬೇಕು. ವಿಷಯವನ್ನು ಕೂಲಂಕಷವಾಗಿ ತಿಳಿದುಕೊಂಡು, ಸಮಗ್ರ ದೃಷ್ಟಿಯಿಂದ ಅರ್ಭಟ, ಕಾವುಗಳಿಲ್ಲದೆ ವಿಚಾರ ವಿನಿಮಯ ಮಾಡಿಕೊಳ್ಳಲು ಸಾಧ್ಯವಿರಬೇಕು. ಶಾಂತವಾಗಿ, ವಿವೇಕದಿಂದ, ದೂರದೃಷ್ಟಿಯಿಂದ ಅತ್ಯಂತ ವಿವಾದಾಸ್ಪದವಾದ ವಿಷಯಗಳನ್ನು ಚರ್ಚಿಸಿ ತೀರ್ಮಾನ ಮಾಡಿಕೊಳ್ಳಲು ಒಂದು ದೇಶದಲ್ಲಿ ಒಂದೂ ತಾಣವೂ ಇಲ್ಲವಾದರೆ ಅದೆಂತಹ ದೇಶ? ಅಲ್ಲಿ ವಿವೇಕಯುತವಾದ ತೀರ್ಮಾನಗಳನ್ನು ಕೈಗೊಳ್ಳುವುದು ಹೇಗೆ ಸಾಧ್ಯ?” ಪ್ರಶಾಂತವಾದ ವಾತಾವರಣದಲ್ಲಿ ಶಾಂತ ಮನಸ್ಸಿನಿಂದ ಜ್ವಲಂತ ಸಮಸ್ಯೆಗಳನ್ನು ಅತ್ಯಂತ ಉದ್ರೇಕಕಾರಿಯಾದ ವಿಷಯಗಳನ್ನು ವಿಶ್ಲೇಷಿಸಿ ಮಾರ್ಗದರ್ಶನ ಮಾಡುವ ವಿವೇಕದ ತವರಾಗಬೇಕು ವಿಶ್ವವಿದ್ಯಾ ನಿಲಯಗಳು.

ಹತ್ತು ಬೃಹತ್ ಸಂಪುಟಗಳಲ್ಲಿ ಮಾನವನ ನಾಗರಿಕತೆಯ ಇತಿಹಾಸವನ್ನು ಬರೆದ ಎಲ್‌ಡ್ಯುರಾಂಟ್ ‘Education is the transmission of civilization’ ಎಂದು ಹೇಳಿದ. ಶಿಕ್ಷಣದ ಸ್ವರೂಪವನ್ನು ಕುರಿತ ಸೊಗಸಾದ ಮಾತುಗಳಲ್ಲಿ ಇದೂ ಒಂದು. ವಿದ್ಯಾವಂತ ಯಾವುದೇ ಸನ್ನಿವೇಶವನ್ನು ಅಥವಾ ಪ್ರಶ್ನೆಯನ್ನು ನೋಡುವ ರೀತಿಯಲ್ಲಿ ಆತನ ವಿದ್ಯೆಗೆ ಸಾಕ್ಷಿಯಾಗಿರುತ್ತದೆ. ‘ಸಿವಿಲೆಜೇಷನ್’ ಅಥವಾ ‘ನಾಗರಿಕತೆ’ ಎನ್ನುವುದು ಒಂದು ಮನೋಧರ್ಮವೂ ಹೌದು. ಒಂದು ವ್ಯವಸ್ಥೆಯೂ ಹೌದು. ವಿದ್ಯಾಸಂಸ್ಥೆಗಳು, ನ್ಯಾಯಾಲಯಗಳು, ಕಲಾಕೇಂದ್ರಗಳು, ಗ್ರಂಥಭಂಡಾರಗಳು, ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುವ ಸಂಸ್ಥೆಗಳು. ಎಲ್ಲ ಈ ವ್ಯವಸ್ಥೆಯ ಅಂಗಗಳು.

ರವೀಂದ್ರನಾಥ ಠಾಕೂರರು ಒಮ್ಮೆ ಹೀಗೆ ಹೇಳಿದ್ದರು. “Man is worst animal, when he is an animal” ಮನುಷ್ಯ ಅನಾಗರಿಕನಾಗಿ ನಡೆದುಕೊಂಡಾಗ ಯಾವ ಹುಲಿಯೂ ಅವನಷ್ಟು ಕ್ರೂರಿಯಲ್ಲ. ಯಾವ ತೋಳಕ್ಕೂ ಅವನಷ್ಟು ಹಸಿವಿಲ್ಲ, ಯಾವ ನರಿಯೂ ಅವನನ್ನು ಕುಯುಕ್ತಿಯಲ್ಲಿ ಸರಿಗಟ್ಟಲಾರದು. ಜರ್ಮನಿಯ ಒಬ್ಬ ಐಕ್‌ಮನ್ ವಿಷವಾಯುವನ್ನು ಪ್ರಯೋಗಿಸಿ ಐವತ್ತು ಲಕ್ಷಕ್ಕೂ ಹೆಚ್ಚು ಜನರನ್ನು ಕೊಂದ. ಇಡೀ ದೇಶಗಳು ಕ್ರೌರ್ಯ, ಸ್ವಾರ್ಥಗಳ ಹಾದಿ ಹಿಡಿದಿದ್ದನ್ನು ಇತಿಹಾಸದ ಮೂಲಕ ತಿಳಿದುಕೊಂಡಿದ್ದೇವೆ. ನಾಗರಿಕತೆಯ ಬಿರುಗಾಳಿಯನ್ನು ಎದುರಿಸಿ ಉರಿಯುತ್ತಿರುವ ದೀಪ, ವ್ಯಕ್ತಿ, ಸಮುದಾಯ, ಮಾನವಕುಲ ಉಳಿಯಲು ಅನಿವಾರ್ಯವಾದ ದೀಪ. ಈ ದೀಪ ಆರಿ ಹೋಗದಂತೆ ಉಳಿಸಬೇಕಾದು ವಿದ್ಯಾವಂತರು. ಎಲ್ ಡ್ಯುರಾಂಟ್ ಹೇಳಿದಂತೆ ನಾಗರಿಕತೆಯ ಅವಿಚ್ಛಿನ್ನ ಪ್ರವಾಹವೇ ಶಿಕ್ಷಣ. ಅಂತಹ ಶಿಕ್ಷಣವನ್ನು ನಾವು ಪಡೆಯುವಂತಾಗಬೇಕು.

**ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಡಿ.ಕೆ.ಶಿವಕುಮಾರ್ ಅವರ ನೂತನ ಸರ್ಕಾರಕ್ಕೆ ‘ಸಿದ್ಧಗಂಗಾ’ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸುತ್ತದೆ.**

**ಎಚ್.ಎಸ್.ಸಿದ್ಧಗಂಗಪ್ಪ**
**ಸಂಪಾದಕರು**



## ಶ್ರೀವಾಣಿ



# ಸಾಧನೆಯ ನಾಲ್ಕು ಪಥಗಳು

ನಮ್ಮ ಭರತಖಂಡದ ಆರ್ಯಜನಾಂಗ ವಿಶ್ವವ್ಯಾಪಕ ಮತ್ತು ವಿಶ್ವಾತೀತನಾದ ಪರಮಾತ್ಮನೊಡನೆ ಬೆರೆಯುವ ಪ್ರಯತ್ನವನ್ನು ಬಹುಕಾಲದಿಂದಲೂ ಬೆಳೆಸಿಕೊಂಡು ಬಂದಿದೆ. ಈ ವಿಚಾರವನ್ನು ಮಹಾನ್ ದಾರ್ಶನಿಕರಾದ ಶ್ರೀ ಅರವಿಂದರು ತಮ್ಮ 'Life Divine' ಎಂಬ ಗ್ರಂಥದಲ್ಲಿ ಕೂಲಂಕಷವಾಗಿ ವಿಚಾರ ಮಾಡಿದ್ದಾರೆ. ಮಾನವನು ತನ್ನ ಪರಮ ಗುರಿಯತ್ತ ಸಾಗುವ ಆಂತರಿಕವಾದ ನಾಲ್ಕು ದಿವ್ಯಪಥಗಳನ್ನು ಅಲ್ಲಿ ವಿವರಿಸಿದ್ದಾರೆ. ಅವುಗಳಾವುವೆಂದರೆ ಧರ್ಮ (Religion) ಗೋಚರವಸ್ತುಗಳ ಉಪಾಸನೆ (Occultision) ಆಧ್ಯಾತ್ಮಿಕ ತತ್ವಜಿಜ್ಞಾಸೆ (Spiritual thought) ಮತ್ತು ಅನುಭವ (Inner Spiritual Experience). ಈ ನಾಲ್ಕು ಮಾರ್ಗಗಳಲ್ಲಿ ಮೊದಲನೆಯ ಮೂರು ಮಾರ್ಗಗಳು ಸಾಧನಾ ರೂಪಗಳು ಮಾತ್ರ. ಪರಂತು ನಾಲ್ಕನೆಯ ಪಥ ಸಿದ್ಧಿರೂಪವಾದುದು. ಈ ನಾಲ್ಕು ಪಥಗಳು ಪರಸ್ಪರ ಪೂರಕವೇ ಹೊರತು ಮಾರಕವಲ್ಲ. ಆದರೆ ಯಾವ ಧರ್ಮವೇ ಆಗಲಿ ಅದು ಅನುಭಾವದ ಮಟ್ಟಕ್ಕೇರದಿದ್ದರೆ ಫಲಪ್ರದವಾಗುವುದಿಲ್ಲ. ಪ್ರಕೃತ ಅನುಭಾವವೆಂದರೆ ಕೇವಲ ಬಾಹ್ಯ ವಸ್ತುಗಳಿಂದ ಬರುವ ಅನುಭಾವವಲ್ಲ. ಏಕೆಂದರೆ ಈ ಬಾಹ್ಯವಸ್ತುಗಳ ಅನುಭವದಿಂದ ಬರುವ ಸಂತೃಪ್ತಿಯೇ ಮಾನವನಿಗೆ ಪರಮಗುರಿ ಯಾಗಿರುವುದಿಲ್ಲ. ಮೇಲಾಗಿ ಅನುಭವವೆನ್ನುವುದು ಸತ್ಯಾನ್ವೇಷಣೆ ಆಂತರಿಕ ದೃಷ್ಟಿ. ಅದು ಭಾವನೆಗೆ ಸಂಬಂಧಪಟ್ಟದ್ದು ಮತ್ತು ತರ್ಕಾತೀತವಾದುದು. ಮಿಂಚಿನಂತೆ ಪ್ರಕಾಶಮಾನವಾದ ದರ್ಶನದ ಗ್ರಹಿಕೆಯೇ ಅನುಭಾವಿಗಳ ಪ್ರಯತ್ನ ಮತ್ತು ಗುರಿ.

* * *

# ಮಾಟದ ನೈಜಾರ್ಥ

'ಮಾಡಬೇಕು, ಮಾಡದಂತಿರಬೇಕು, ಮಾಡುವ ಮಾಟದಲ್ಲಿ ತಾನಿಲ್ಲದಿರಬೇಕು'. ಬಸವಣ್ಣನವರ ಈ ಮಾತು ಆಧ್ಯಾತ್ಮ ಜೀವನದ ನೆಲೆಗಟ್ಟು. ಐಹಿಕ ಪಾರಮಾರ್ಥಿಕ ಜೀವನದ ಬೆಸುಗೆ. ಮಾಟದ ನೈಜಾರ್ಥ. ಅಹಂಕಾರ ಕರ್ತೃತ್ವ ಬುದ್ಧಿಯನ್ನು ಬಿಟ್ಟು ಮಾಡುವುದೇ ನಿಜವಾದ ಮಾಟ ಅಥವಾ ಕಾಯಕ. ಇಂಥ ಮಾಟದಿಂದ ವ್ಯಕ್ತಿಯ ತನು-ಮನ-ಭಾವಗಳು ಪರಿಶುದ್ಧವಾಗುತ್ತವೆ. ಸಮಾಜದಲ್ಲಿ ಸಮತೆ, ಸೋದರತೆ, ಶಾಂತಿಗಳು ಪ್ರತಿಷ್ಠಿತವಾಗುತ್ತವೆ. ಇಂಥ ಕಾಯಕ ತತ್ತ್ವವನ್ನು ಬಸವಾದಿ ಪ್ರಮಥರು ಮೊದಲು ತಮ್ಮ ಜೀವನದಲ್ಲಿ ಆಚರಿಸಿಕೊಂಡು ನಂತರ ಸಮಾಜದಲ್ಲಿ ತಂದರು. ಆದ್ದರಿಂದ ಆ ಸಮಾಜದ ಜನತೆ ಪ್ರಾಕೃತಿಕ ಜೀವನದಿಂದ ಬಿಡುಗಡೆ ಹೊಂದಿ ಆಧ್ಯಾತ್ಮಿಕ ಜೀವನವನ್ನು ಸಾಧಿಸಿಕೊಂಡಿತ್ತು. ಅಂಥ ಸಮಾಜದ ಪುನರ್‌ಸೃಷ್ಟಿ ಇಂದು ನಮ್ಮ ನಾಯಕರಿಂದ ಅವಶ್ಯ ಆಗಬೇಕಾಗಿದೆ. ಅದಾದಾಗಲೇ ಸುಖ, ಶಾಂತಿ.

# ವಚನ-ತ್ರಿವಿಧಿ

## ಶ್ರೀ ಸಿದ್ಧಲಿಂಗೇಶ್ವರ ವಚನ



**ಇಬ್ಬರಿಗೊಬ್ಬ ಮಗ ಹುಟ್ಟಿ ಅವನೊಬ್ಬನಿಗೈವರು ಹೆಂಡರು ನೋಡಾ,**
**ಸವತಿ ಮಚ್ಚರವ ಬಿಟ್ಟು ತಮ್ಮ ತಮ್ಮ ಭಾವದಲ್ಲಿ ನೆರೆದರು ನೋಡಾ,**
**ಇವರ ಕೂಟದಲ್ಲಿ ಮೈಮರೆದುದ ಕಂಡು ಮೇಲೊಬ್ಬ ಸತಿ ಬಂದು ನೆರೆಯಲು**
**ಐವರ ಮನೆ ಮೂರ್ತಿ ಕೆಟ್ಟು ಆಕೆಯ ಸಂಗದಿಂದ ಸ್ವೈರಗಾಗಿ**
**ಸರ್ವ ನಿರ್ವಾಣಿಯಾದೆನು ಕಾಣಾ**
**ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ॥**

ಇಬ್ಬರಿಗೆ-ಗುರುಶಿಷ್ಯರೀರ್ವರಿಗೆ; ಮಗ ಒಬ್ಬ-ಇಷ್ಟಲಿಂಗವೆಂಬ ಕುಮಾರನು; ಹುಟ್ಟಿ-ಉತ್ಪತ್ತಿಯಾಗಿ, ಅವನೊಬ್ಬನಿಗೆ-ಇಷ್ಟಲಿಂಗವೆಂಬ ಕುಮಾರನಿಗೆ, ಐವರು ಹೆಂಡರು ನೋಡಾ-ಪಂಚಶಕ್ತಿಯರ ವಧೂಟಿಗಳಾಗಿರ್ಪರು ಕಂಡಾ; ಸವತಿಮತ್ಸರವ ಬಿಟ್ಟು-ಭಿನ್ನಜ್ಞಾನ ಭಿನ್ನಕ್ರಿಯೆಗಳನ್ನು ಬಿಟ್ಟುಕೊಟ್ಟು, ತಮ್ಮ ತಮ್ಮ ಭಾವದಲ್ಲಿ-ತಮ್ಮ ತಮ್ಮ ಶಿವಭಾವದಲ್ಲಿ, ನೆರೆದರು-ಕೂಡಿದರು, ನೋಡಾ-ಕಂಡಾ, ಐವರ-ಪಂಚಶಕ್ತಿಯರ, ಕೂಟದಲ್ಲಿ-ಸಂಗದಲ್ಲಿ, ಮೈಮರೆದುದ-ಪರವಶವಾಗದಂಥಾದ್ದನ್ನು, ಕಂಡು-ನೋಡಿ, ಮೇಲೊಬ್ಬ ಸತಿ-ಬ್ರಹ್ಮರಂಧ್ರದಲ್ಲಿರುವ ಚಿತ್‌ಶಕ್ತಿಯು, ಬಂದು-ಐದಿಬಂದು, ನೆರೆಯಲು-ಇಷ್ಟಲಿಂಗದ ಗೋಳಕದಲ್ಲಿ ಕೂಡಲು, ಐವರು-ಪಂಚವಿಧ ಶಕ್ತಿಗಳ, ಮನವಾರ್ತೆ-ಮನೋಪ್ರಪಂಚು, ಕೆಟ್ಟು-ನಷ್ಟವಾಗಿ, ಆಕೆಯ-ಚಿತ್‌ಶಕ್ತಿಯ, ಸಂಗದಿಂದ-ಸತ್ಸಂಗದಿಂದ, ಸ್ವೈರಗಾಗಿ-ಪರವಶವಾಗಿ, ಸರ್ವ-ಸಮಸ್ತವಾದ, ನಿರ್ವಾಣಿಯಾದೆನು-ಮೋಕ್ಷ ಸ್ವರೂಪನಾದೆನು, ಕಾಣಾ-ಕಂಡಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪಭುವೇ.

**(ಕೃಪೆ: ತೋಂಟದಾರ್ಯ ವಚನ ವ್ಯಾಖ್ಯೆ- ಸಂಪಾದಕರು- ಡಾ॥ ಸಾ.ಶಿ. ಮರುಳಯ್ಯ, ಪ್ರಕಾಶಕರು, ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ (ರಿ.) ಎಡೆಯೂರು-ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ)**

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಅಂತರಂಗದ ಕುದಿಗೆ ಒಳಗಾಗದ ಬದುಕು
ಚಿಂತೆ ಚಿತೆಯೊಳಗೆ ಬೆಂದಪುದು । ತಾನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬಸವಣ್ಣನ ನೆನೆದರೆ ಹಸನಾಗುವುವೀ ಬದುಕು
ಬಸವಣ್ಣನೇ ದೈವ ಮನುಕುಲಕೆ । ತಾನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ನೀರಮೇಲೆ ತಾನೆಣ್ಣೆ ತೇಲುವ ವೋಲು
ಯಾರೊಂದಿಗಾದರೂ ನೀಬಾಳು । ಹರಸೀವ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಲಿಂಗಕ್ಕರ್ಪಿಸದೆ ಸಲಿಸದಿರು ಏನನ್ನು
ಅಂಗದಿಚ್ಛೆಗೆ ಬಾಯಿ ಬಿಡಬೇಡ । ನೀನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಎಣ್ಣೆ ಬತ್ತಿ ಕೂಡಿ ಜ್ಯೋತಿ ಉರಿವಂದದಲಿ
ಅರಿವು ಆಚಾರಗಳು ಬೆಸದಿರಲಿ । ತಾನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಜ್ಞಾನಕ್ರಿಯಾರೂಪ ಸಾಕಾರವಾಗಿರುವೆ
ಮಾನನಿಧಿ ಮಂಗಲ ಶ್ರೀಗುರುವೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಸೇವೆಯೆ ಶಿವಯೋಗ ಕಾಯಕವೆ ಶಿವಪೂಜೆ
ಮಾನವೀಯತೆಯೆ ಶಿವಧರ್ಮ । ತಾನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಲಿಂಗವಂತನಾಗಿ ಅಂಗಸಂಗವಮಾಡಿ
ಕಂಗಳಿಚ್ಛೆಗೆ ಎಳಸದಿರು । ನೀವೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ತನುವ ಸಂತೈಸಿಕೋ ಮನವಸಂತೈಸಿಕೋ
ತನುಮನವ ಬಸವನಲಿ ಸಂತೈಸು । ನೀನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಇಹ-ಪರವೆಂಬವು ಅವಳಿ ಜವಳಿ ರತ್ನ
ಇಹವು ಪರಕೆ ಹಿಡಿದ ಕೈದೀಪ । ತಾನೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

**ಪ್ರೊ. ಹೆಚ್.ವಿ. ವೀರಭದ್ರಯ್ಯ**







ನುಡಿನಮನ

# ವೈರಾಗ್ಯನಿಧಿ, ಮಾತೃಹೃದಯಿ, ದೇಗುಲಮಠದ ಕೀರ್ತಿ ಕಳಸ ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಶಿವನಲ್ಲಿ ಲೀನ

– ಎಚ್.ಎಸ್.ಸಿದ್ಧಗಂಗಪ್ಪ *



ಶ್ರೀ ದೇಗುಲಮಠದ ಪೀಠಾಧ್ಯಕ್ಷರಾಗಿ ೪೪ ವರ್ಷಗಳ ಸುದೀರ್ಘ ಸೇವಾವಧಿಯಲ್ಲಿ ಸಾವಿರಾರು ಬಡ, ದೀನ, ದಲಿತ, ಅನಾಥ ಮಕ್ಕಳಿಗೆ ಆಶ್ರಯ ನೀಡಿ ಅವರ ಭವಿಷ್ಯವನ್ನು ರೂಪಿಸಿ, ಭರವಸೆಯ ಬೆಳಕು ನೀಡಿ, ಬಸವಾದಿ ಶರಣರ ಆದರ್ಶ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಶ್ರೀಮಠದಲ್ಲಿ ಸಾಕಾರಗೊಳಿಸಿದ್ದ, ಮಾತೃಹೃದಯಿ, ಸನ್ಯಾಸತ್ವಕ್ಕೆ, ಘನತೆ, ಗೌರವವನ್ನು ತಂದುಕೊಟ್ಟಿದ್ದ ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಜೂನ್ ೨೨ ರಂದು, ಶಿವನಲ್ಲಿ ಲೀನವಾದರು. ಸುದ್ದಿ ತಿಳಿದ ಲಕ್ಷಾಂತರ ಭಕ್ತರು, ಅಭಿಮಾನಿಗಳು, ಹಿರಿಯ ವಿದ್ಯಾರ್ಥಿಗಳು ದುಃಖತಪ್ತರಾದರು. ಈ ಸಂದರ್ಭದಲ್ಲಿ ಪರಮಪೂಜ್ಯರ ದಿವ್ಯ ಶಿವಾತ್ಮಕ್ಕೆ ಭಕ್ತಿಪೂರ್ವಕ ಶ್ರದ್ಧೆಯನ್ನು ಸಿದ್ಧಗಂಗಾ ಅರ್ಪಿಸುತ್ತದೆ.

ನಮ್ಮೆಲ್ಲರ ಆರಾಧ್ಯದೈವ, ನಡೆದಾಡುವ ದೇವರಾಗಿದ್ದ ತ್ರಿವಿಧ ದಾಸೋಹಿ, ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಶಿವನುಡಿಗಳಲ್ಲಿ ಕಾವಿಯ ಮಹತ್ವವನ್ನು ಕುರಿತು "ಸ್ವಾಮಿಗಳು ಚಾರಿತ್ರ್ಯವಂತರಾಗಬೇಕು, ಶುದ್ಧ ಚಾರಿತ್ರ್ಯ ಕಾಪಾಡಿಕೊಂಡು ಬರಬೇಕು. ಸದಾ ಜಾಗೃತರಾಗಬೇಕು, ಕಾವಿ ಲಾಂಛನ ಅಲಂಕಾರಕ್ಕಾಗಿ ಧರಿಸುವುದಲ್ಲ, ಅನುಕೂಲ ಜೀವನೋಪಾಯಕ್ಕಲ್ಲ, ಅನುದಿನ ಅನುಕ್ಷಣ, ಆತ್ಮಪರೀಕ್ಷೆಯ ಅವಲೋಕನಕ್ಕಾಗಿ ಇರುವ 'ಕರಗಸ'. ಕಾವಿ ಕಾರುಣ್ಯದ ಕಾರಂಜಿಯಾಗಿರಬೇಕು, ಮಗುವಿನ ಮುಗ್ಧ ಮನಸ್ಸು, ಪ್ರಬುದ್ಧ ವಿಚಾರ ಶುದ್ಧವಿರಬೇಕು, ಅಂತರಂಗದಲ್ಲಿ ಅಲೆ ಅಲೆಯಾಗಿ ಏಳುವ ಅಸಂಖ್ಯಾತ ಕಾಮನೆಗಳನ್ನು ಸುಡುವುದಕ್ಕಾಗಿ ಅಂತರಂಗ–ಬಹಿರಂಗಗಳೆರಡನ್ನು ಏಕಕಾಲಕ್ಕೆ ಪವಿತ್ರಗೊಳಿಸುವ ಪ್ರವೃತ್ತಿಗಾಗಿ ಕಾವಿಧಾರಿಗಳಾಗಬೇಕು. ಬ್ರಹ್ಮಚರ್ಯ ಪಾಲನೆ, ಸ್ವಾಮಿಗಳಾದವರು ಎದುರಿಸಬೇಕಾದ ಅಗ್ನಿ ಪರೀಕ್ಷೆ. ಅದರಲ್ಲಿ ಜಯಶೀಲರಾಗದ ಹೊರತು ಕಾವಿಧಾರಿಯಾಗಲು ಅರ್ಹರಾಗಲು ಬರದು. ಅಲ್ಲಿ ಗೆದ್ದರೆ ಸಮಾಜ

* ೧೬೧೭, ಮಾತೃಶ್ರೀ, ೮ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು, ಸರ್ ಎಂ.ವಿ. ಮುಂದುವರೆದ ಬಡಾವಣೆ, ಮುದ್ದಿನಪಾಳ್ಯ ಮುಖ್ಯರಸ್ತೆ, ಬೆಂಗಳೂರು–೯೧. ಮೊ: ೯೮೪೫೫ ೬೫೮೭೧



ಗೌರವ ಕೊಡುತ್ತದೆ. ಆತ್ಮಸ್ಥೈರ್ಯ ಬೆಳೆಯುತ್ತದೆ. ಸಮಾಜಕ್ಕೆ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಬರುತ್ತದೆ. ಸ್ವಾಮೀಜಿಗಳಾದವರು ಚಿಂತನಶೀಲರಾಗಬೇಕು, ಸಾಧಕರಾಗಬೇಕು'. ಪರಮಪೂಜ್ಯ ಶ್ರೀಗಳವರ ಒಂದೊಂದು ನುಡಿಯನ್ನು ಅಕ್ಷರಶಃ ಪಾಲಿಸಿ ಸನ್ಯಾಸತ್ವಕ್ಕೆ ಒಂದು ಗೌರವವನ್ನು ತಂದುಕೊಟ್ಟವರು ಪರಮಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಎಂದು ಹೇಳುವಾಗ ಭಕ್ತಿ, ಧನ್ಯತಾಭಾವನೆ ಉಂಟಾಗುತ್ತದೆ.

ಕವಿ ವಾಣಿಯಂತೆ "ಹೆಸರನು ಬಯಸದ" ವಿನಮ್ರಸೇವೆ ಪೂಜ್ಯ ಶ್ರೀಗಳವರದು. ದೇಗುಲಮಠವನ್ನು ನಿಜವಾದ ಅರ್ಥದಲ್ಲಿ ಗ್ರಾಮೀಣ ಬಡವರು ಮತ್ತು ದೀನ ದಲಿತರ ಮಕ್ಕಳ ಶಿಕ್ಷಣಕ್ಕೆ ಒಂದು ಆಶ್ರಯತಾಣವನ್ನಾಗಿಸಿದ ಕೀರ್ತಿ ಪರಮಪೂಜ್ಯರಿಗೆ ಸಲ್ಲುತ್ತದೆ.

ಶ್ರೀದೇಗುಲಮಠಕ್ಕೂ, ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರಿಗೂ ಕಳೆದ ೨೯ ವರ್ಷಗಳಿಂದಲೂ ನನಗೆ ಅವಿನಾಭಾವ ಸಂಬಂಧ. ದೇಗುಲಸಿರಿ ಹಾಗೂ ಪಟ್ಟಾಧಿಕಾರದ ರಜತ ಮಹೋತ್ಸವ ಸಂದರ್ಭದಲ್ಲಿ ಹೊರತಂದ "ದೇಗುಲಸಂಪದ" ಸಂಪುಟದ ಸಂಪಾದಕನಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸ ಬಯಸುತ್ತೇನೆ. ಅಲ್ಲದೆ ಶ್ರೀಮಠದ ಹಿರಿಯ ವಿದ್ಯಾರ್ಥಿ ಹಾಗೂ ಭಕ್ತರಾದ ಡಾ. ಸಿ.ಚಂದ್ರಪ್ಪ ಅವರ ಆಶಯದಂತೆ ನಾನು ಬರೆದ "ಶ್ರೀ ದೇಗುಲಮಠದ ಇತಿಹಾಸ ಮತ್ತು ಪರಂಪರೆ" ಕೃತಿ ಪ್ರಸ್ತುತ ಕಿರಿಯ ಶ್ರೀಗಳವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಸಂದರ್ಭದಲ್ಲಿ ಲೋಕಾರ್ಪಣೆಯಾದುದು ಒಂದು ಅವಿಸ್ಮರಣೀಯ ಸಂದರ್ಭ.




ಹಿರಿಯ ವಿದ್ವಾಂಸರೂ, ಇತಿಹಾಸ ತಜ್ಞರಾದ ಡಾ.ಎಂ.ಜಿ.ನಾಗರಾಜ್ ಅವರು ಅಭಿಪ್ರಾಯಪಟ್ಟಿರುವಂತೆ 'ಕನಕಪುರ ದೇಗುಲಮಠವು 'ಪ್ರಭುದೇವರ' ಅಲ್ಲಮ ಸಂಸ್ಕೃತಿಯಲ್ಲಿ ಉಗಮಗೊಂಡ 'ಆದಿನಿರ್ವಾಣಸ್ವಾಮಿ'ಗಳ ಪರಂಪರೆಯದು. 'ನಿರ್ವಾಣ' ಕಾಯಕ ಮಾಡುತ್ತಲೇ ಭಕ್ತಿ ಜಾಗೃತಿ ಸಾಧ್ಯವಾಗಿದೆ. ಸೇವಾ ಜಾಗೃತ ಸ್ಥಾನವಾಗಿದೆ. ಜಾಗೃತ ಬಯಲ ನೆಲೆಯಾಗಿದೆ. ಅಲ್ಲಿಯ ಪ್ರಸಾದವುಂಡವರು, ಆಸರೆಯಲ್ಲಿದ್ದವರು, ಇದ್ದು ಕಲಿತವರು, ಕೃಪೆಗೊಳಗಾದವರು ಯಾರೆಲ್ಲರೂ 'ಮಾನವಕುಲಂ ಒಂದೆವಲಂ' ಎಂಬ ಪರಿಕಲ್ಪನೆಯಲ್ಲಿ ಮಿಂದು ಹೋಗಿದ್ದಾರೆ. ಮಹಾಲಿಂಗ

ಪ್ರತಿಭೆಯನ್ನು ಅನುಭವಿಸಿದ್ದಾರೆ. ನಿರಂಜನ ಸ್ವಾಮಿಗಳು ತಮ್ಮ ಶಿಷ್ಯರಲ್ಲಿ ಅಗ್ರಗಣ್ಯರಾದ ಶ್ರೀ ಆದ್ಯನಿರ್ವಾಣ ಸ್ವಾಮಿಗಳನ್ನು ಈ ನೆಲದಲ್ಲಿ ನೆಲಗೊಳಿಸಿ ಈ ಕ್ಷೇತ್ರವನ್ನು ಉದ್ಧರಿಸಿ ಜನರಲ್ಲಿ ಧರ್ಮದ ಬಗ್ಗೆ ಜಾಗೃತಿ ಮೂಡಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡು' ಎಂದು ಆಶೀರ್ವದಿಸಿದರೆಂದು ತಿಳಿದು ಬರುತ್ತದೆ.

ಸುದೀರ್ಘ ಇತಿಹಾಸ ಹಾಗೂ ಭವ್ಯ ಪರಂಪರೆಯುಳ್ಳ ಶ್ರೀ ದೇಗುಲಮಠದ ಗುರುಪರಂಪರೆಯಲ್ಲಿ ಅನೇಕ ಜನ ಮಠಾಧೀಶರು ಆಗಿ ಹೋಗಿದ್ದಾರೆ. ಲಭ್ಯವಿರುವ ಮಾಹಿತಿಯ ಪ್ರಕಾರ ಪರಮಪೂಜ್ಯ ಶ್ರೀ ಶ್ರೀ ಆದ್ಯನಿರ್ವಾಣ ಸ್ವಾಮಿಗಳವರಿಂದ ಮೊದಲುಗೊಂಡು ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳವರು ಆಗಿಹೋಗಿದ್ದಾರೆ. ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ೧೩ನೇ ಪೀಠಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದರು. ಪರಮಪೂಜ್ಯ ಡಾ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಕರಕಮಲ ಸಂಜಾತರಾದ ಪೂಜ್ಯ ಶ್ರೀ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳವರು ಅಕಾಲಿಕವಾಗಿ ಲಿಂಗೈಕ್ಯರಾದುದನ್ನು ಈ ಸಂದರ್ಭದಲ್ಲಿ ಸ್ಮರಿಸಬಯಸುತ್ತೇನೆ.

**ಜನನ-ಶಿಕ್ಷಣ:** ಕಾವೇರಿ ಪ್ರಾಂತ್ಯವೆಂದೇ ಪ್ರಸಿದ್ಧಿಯಾದ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ಆಚಾರ ಸಂಪನ್ನರೂ, ಸಜ್ಜನರೂ ಆದ ತಂದೆ ಶ್ರೀ ವೀರಭದ್ರಪ್ಪ ತಾಯಿ ಶ್ರೀಮತಿ ತಾಯಮ್ಮ ಶರಣ ದಂಪತಿಗಳಿಗೆ ಮೇ ೨೦, ೧೯೪೩ ರಂದು, ಪುತ್ರರತ್ನ ಜನಿಸಿತು. ತಂದೆ ತಾಯಿಗಳು ಮಗುವಿಗೆ ಪ್ರೀತಿಯಿಂದ ಇಟ್ಟ ಹೆಸರು ಶಿವರುದ್ರಸ್ವಾಮಿ. ತಮ್ಮ ಪುತ್ರರತ್ನ ಮುಂದೆ ಬೆಳೆದು ಶಿವನಂತೆ ಲೋಕಕಲ್ಯಾಣದಲ್ಲಿ ತೊಡಗಿಸಿಕೊಳ್ಳುವ ಮಹಾಪುರುಷನಾಗಲಿ, ವೀರಭದ್ರನಂತೆ ಆತ್ಮಸ್ಥೈರ್ಯದಿಂದ ಒಳ್ಳೆಯ ಕೆಲಸ ಮಾಡಲು ಮುನ್ನುಗುವ ಧೈರ್ಯವಂತನಾಗಲಿ ಎಂಬ ಆಶಯದಿಂದ ಶಿವರುದ್ರಸ್ವಾಮಿ ಎಂದು ಹೆಸರಿಟ್ಟಿರಬೇಕೆನಿಸುತ್ತದೆ. ತಾಯಿ ಈ ಪುಟ್ಟ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತಾ –



**ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು – ಕಂದಯ್ಯ
ಜ್ಯೋತಿಯೇ ಆಗು ಜಗಕ್ಕೆಲ್ಲ.**

ಎಂದು ಹಾಡುತ್ತಿದ್ದಳು. ಆ ಮಹಾತಾಯಿಯ ಆಶಯ ಹುಸಿಯಾಗಲಿಲ್ಲ ! ವ್ಯವಸಾಯ ಅವರ ಕುಟುಂಬದ ಮುಖ್ಯ ಕಸುಬಾಗಿತ್ತು. ಬಸವಾದಿ ಶರಣ ಜೀವನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದ ಅವರು ಕಷ್ಟಪಟ್ಟು ದುಡಿದು ಪ್ರಾಮಾಣಿಕವಾಗಿ ಬದುಕಬೇಕು, ತಮ್ಮ ಕೈಲಾದಷ್ಟು ಸಮಾಜಕ್ಕೆ ನೆರವಾಗಬೇಕು ಎಂಬ ಉದಾತ್ತ ಭಾವನೆಯನ್ನು ಹೊಂದಿದವರಾಗಿದ್ದರು.



ಪ್ರಾಥಮಿಕ ಶಿಕ್ಷಣ ಕುರುಬೂರಲ್ಲೇ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣ ಚಾಮರಾಜ ನಗರದಲ್ಲಿ ನಡೆಯಿತು. ಶ್ರೀ ಶಿವರುದ್ರಸ್ವಾಮಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಮರಿಯಾಲ ಮಠದಲ್ಲಿದ್ದರು. ಆ ಸಂದರ್ಭದಲ್ಲಿ ಅವರಿಗೆ ಧಾರ್ಮಿಕ ಶಿಕ್ಷಣವೂ, ವೇದ, ಆಗಮ ಪೂಜಾದಿಗಳ ಬಗ್ಗೆ ತರಬೇತಿ ದೊರೆಯಿತು. ಜೊತೆಗೆ ಅವರು ನೆಲ್ಲಿಗೆರೆ ಮಠ, ದೇವನೂರು ಮಠ, ಸುತ್ತೂರು ಮಠ, ಮಲ್ಲಿನಮೂಲೆ ಮಠ ಮೊದಲಾದ ಮಠಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಆಸಕ್ತಿ, ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಮಠಗಳ ಪರಿಸರ ಪ್ರಭಾವದಿಂದಾಗಿ ಕೃಷಿಕ ಕುಟುಂಬದಲ್ಲಿ ಜನಿಸಿದ ಶಿವರುದ್ರಸ್ವಾಮಿಗೆ ಆಧ್ಯಾತ್ಮ ಕೃಷಿಯ ಬಗ್ಗೆ ಆಸಕ್ತಿ ಬಂದುದು ಸಹಜವಾಗಿಯೇ ಇದೆ. ವಿದ್ಯಾರ್ಥಿ ದೆಸೆಯಿಂದಲೇ ಗುರು-ಲಿಂಗ-ಜಂಗಮ ಸೇವೆಯ ಬಗ್ಗೆ ಆಸಕ್ತಿ, ಶ್ರದ್ಧೆ, ಕಠಿಣ ಪರಿಶ್ರಮ, ಸರಳ ಜೀವನ ಅದರೊಂದಿಗೇ ಬೆಳೆಯುತ್ತಾ ಬಂದವು.



ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ ಮುಂದೆ ಓದಲು ಆರ್ಥಿಕ ಪರಿಸ್ಥಿತಿ ಅಡ್ಡಬಂದಿತು. ಆದರೂ ಎದೆಗುಂದದೆ ಮುಂದೆ ಓದಬೇಕೆಂಬ ಉತ್ಕಟವಾದ ಬಯಕೆಯಿಂದ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ

ಪಿ.ಯು.ಸಿ. ತರಗತಿಗೆ ಸೇರಿದರು. ಅಶನ-ವಸತಿಗಳಿಗೆ ಶ್ರೀ ಸುತ್ತೂರು ಮಠದಲ್ಲಿ ಆಶ್ರಯ ದೊರೆಯಿತು. ಹೋಟೆಲು, ಸಿನಿಮಾ ಮೊದಲಾದ ಆಕರ್ಷಣೆಯಿಂದ ದೂರ ಉಳಿದು ಸಮಯವನ್ನು ಸದುಪಯೋಗ ಮಾಡಿಕೊಳ್ಳಲು ಅಧ್ಯಯನದತ್ತ ಗಮನಹರಿಸಿ ಪಿ.ಯು.ಸಿ. ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರು. ಮುಂದೆ ಮಹಾರಾಜ ಕಾಲೇಜಿನಲ್ಲಿ ಬಿ.ಎಸ್ಸಿ ತರಗತಿಗೆ ಸೇರಿದರು. ಅಲ್ಲಿ ಅರ್ಥಶಾಸ್ತ್ರ ಮತ್ತು ಸಂಖ್ಯಾ ಶಾಸ್ತ್ರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದರು. ಅಶನ ಮತ್ತು ವಸತಿಗೆ ಮೈಸೂರಿನಲ್ಲಿದ್ದ ತುಂಬುನೇರಳೆ ಸಾಹುಕಾರ ಸಿದ್ಧಲಿಂಗಯ್ಯ ಉಚಿತ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆದರು.








**ಸರ್ಕಾರಿ ಉದ್ಯೋಗ:** ಬಿ.ಎಸ್ಸಿ ಪದವಿ ಪರೀಕ್ಷೆಯನ್ನು ಮುಗಿಸಿಕೊಂಡು ರಜೆಯಲ್ಲಿ ತಮ್ಮ ಹುಟ್ಟಿದೂರಿಗೆ ಹಿಂತಿರುಗಿ ಕುಟುಂಬದವರೊಡನೆ ಕೃಷಿ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ೧೯೬೫ ರಲ್ಲಿ ಅವರ ತಂದೆ ಶ್ರೀ ವೀರಭದ್ರಪ್ಪನವರು ವಿಧಿವಶರಾದರು. ಅದೇ ಹೊತ್ತಿಗೆ ಅವರಿಗೆ ನ್ಯಾಯಾಲಯದಲ್ಲಿ (ಲ್ಯಾಂಡ್ ಟ್ರಿಬ್ಯೂನಲ್) ದ್ವಿತೀಯ ದರ್ಜೆ ಗುಮಾಸ್ತರಾಗಿ ಕೆಲಸ ಸಿಕ್ಕಿತು. ೧೯೬೨ರ ಡಿಸೆಂಬರ್‌ನಿಂದ ಅವರ ವೃತ್ತಿ ಜೀವನ ಪ್ರಾರಂಭವಾಯಿತು. ತಾವಾಯಿತು ತಮ್ಮ ಕೆಲಸವಾಯಿತು. ಬಾಡಿಗೆ ಕೊಠಡಿ ಮಾಡಿಕೊಂಡು ತಾವೇ ಅಡುಗೆ ಮಾಡಿಕೊಂಡು ಕೆಲಸಕ್ಕೆ ಹೋಗುತ್ತಿದ್ದರು. ಸರಳ ಜೀವನಕ್ಕೆ ಹೊಂದಿಕೊಂಡಿದ್ದರಿಂದ ಅವರು ಹೆಚ್ಚಿನದೇನನ್ನು ನಿರೀಕ್ಷೆ ಮಾಡುತ್ತಿರಲಿಲ್ಲ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಯನ್ನು ಅರ್ಥಮಾಡಿಕೊಂಡು ಅದರಂತೆ ನಡೆಯುತ್ತಿದ್ದರು. 'ಸರಳ ಜೀವನ ಉದಾತ್ತ ಚಿಂತನ' ಅವರ ಧ್ಯೇಯವಾಗಿತ್ತು.

**ಮರಿಯಾಲ ಮಠದ ಉತ್ತಾರಾಧಿಕಾರಿ:** ಮರಿಯಾಲ ಮಠದ ಪೀಠಾಧಿಪತಿಗಳಾಗಿದ್ದ ಇವರ ಅಣ್ಣಂದಿರಾದ ಶ್ರೀ ಸದಾಶಿವ ಸ್ವಾಮಿಗಳು ತಮ್ಮ ಸಹೋದರ ಶಿವರುದ್ರಸ್ವಾಮಿಯೇ ಶ್ರೀಮಠದ ಉತ್ತರಾಧಿಕಾರಿಯಾಗಬೇಕೆಂದು ಉಯಿಲು ಬರೆದಿದ್ದರು. ೧೯೭೦ ರಲ್ಲಿ ಅವರು ಲಿಂಗೈಕ್ಯರಾದಾಗ ಶ್ರೀ ಶಿವರುದ್ರಸ್ವಾಮಿಯವರು ಆ ಮಠದ ಉತ್ತರಾಧಿಕಾರಿಯಾಗಬೇಕಿತ್ತು. ಆದರೆ ಅಲ್ಲಿಯ ಪರಿಸ್ಥಿತಿ ಪ್ರತಿಕೂಲವಾಗಿತ್ತು. ಅನೇಕ ರೀತಿಯ ತಕರಾರು,

ಸಂಘರ್ಷಗಳನ್ನು ಎದುರಿಸಬೇಕಾಯಿತು ಸಂಘರ್ಷ ನ್ಯಾಯಾಲಯ ಮೆಟ್ಟಿಲೇರಿತ್ತು. ನ್ಯಾಯಾಲಯದಲ್ಲಿ ಶ್ರೀ ಶಿವರುದ್ರಸ್ವಾಮಿ ಅವರಿಗೆ ಜಯ ಲಭಿಸಿದರೂ ಅವರು ಅಲ್ಲಿಗೆ ಅನಿವಾರ್ಯ ಕಾರಣಗಳಿಂದ ಹೋಗಲಿಲ್ಲ.

ಶ್ರೀ ಶಿವರುದ್ರಸ್ವಾಮಿ ಅವರು ಕೆಲವು ದಿನಗಳ ಕಾಲ ಕುಣಿಗಲ್ ತಾಲ್ಲೂಕಿನ ಅಂಕನಹಳ್ಳಿ ಗವಿಮಠದಲ್ಲಿದ್ದು ಅಲ್ಲಿನ ಮಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರ ಕೃಪೆಗೆ ಪಾತ್ರರಾದರು. ನಂತರ ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಹೋಗಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಅನುಗ್ರಹ ಪಡೆದು ಆಶ್ರಮ ಜೀವನ ಹಾಗೂ ಸೇವಾ ಕ್ಷೇತ್ರದ ಪರಿಚಯ ಮಾಡಿಕೊಂಡರು. ಇದರಿಂದ ಅವರಲ್ಲಿ ಆತ್ಮಸ್ಥೈರ್ಯ ಬೆಳೆಯಿತು.

**ನೆಲ್ಲಿಗೆರೆ ಮಠಾಧ್ಯಕ್ಷರಾಗಿ:** ಮಳವಳ್ಳಿ ತಾಲ್ಲೂಕು ನೆಲ್ಲಿಗೆರೆಯಲ್ಲಿ ಭಕ್ತರೊಬ್ಬರು ಮಠವೊಂದನ್ನು ಸ್ಥಾಪಿಸಲು ಮುಂದೆ ಬಂದು, ಒಂದು ಮನೆ ಹಾಗೂ ಜಮೀನನ್ನು ಮರಿಯಾಲ ಮಠದ ಶ್ರೀ ಸದಾಶಿವ ಸ್ವಾಮಿಗಳವರಿಗೆ ದಾನವಾಗಿ ಕೊಟ್ಟಿದ್ದರು. ನೆಲ್ಲಿಗೆರೆಯ ಸದ್ಭಕ್ತರು ಶ್ರೀ ದೇಗುಲಮಠ ಹಾಗೂ ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಶ್ರೀಗಳವರ ಸಲಹೆಯಂತೆ ಶ್ರೀ ಶಿವರುದ್ರಸ್ವಾಮಿ ಅವರು ಹೊಸಮಠಕ್ಕೆ ನಿಯೋಜಿತರಾದರು. ಅಂಕನಹಳ್ಳಿ ಮಠದ ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಬಂಡೇಮಠದ ಪೂಜ್ಯ ಶ್ರೀ ಶ್ರೀ ಶಿವರುದ್ರ ಮಹಾಸ್ವಾಮಿಗಳವರು ಮಹಂತೇಶ್ವರ ಗದ್ದುಗೆ ಮಠದಲ್ಲಿ ವಿಧ್ಯುಕ್ತವಾಗಿ ಸಂನ್ಯಾಸ ದೀಕ್ಷೆಯ ಕಾರ್ಯಕ್ರಮವನ್ನು ನಡೆಸಿದರು. ಶ್ರೀ ದೇಗುಲಮಠದ ಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳು ಹಾಗೂ ಶ್ರೀ ಸಿದ್ಧಗಂಗಾ ಮಠದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯಾಶೀರ್ವಾದ ದೊರೆಯಿತು. ಪೂಜ್ಯ ಶ್ರೀ ಶ್ರೀ ಶಿವರುದ್ರಸ್ವಾಮಿಗಳು ಸಿದ್ಧಗಂಗೆಯಲ್ಲಿ ಪೂಜ್ಯ ಶ್ರೀಗಳವರ ದಿವ್ಯಸಾನ್ನಿಧ್ಯದಲ್ಲಿ ಕೆಲವು ಕಾಲ ಇದ್ದು ಆಚಾರ ಸಂಪತ್ತನ್ನು ಗಳಿಸಿ ಮಠವೊಂದರ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಅಣಿಯಾದರು. ಈ ಅವಧಿಯಲ್ಲಿ ಅವರಿಗೆ ಯಾವುದೇ ಕಠಿಣ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ, ಆತ್ಮವಿಶ್ವಾಸ, ಧೈರ್ಯ, ಸ್ಥೈರ್ಯಗಳು ಮುಪ್ಪರಿಗೊಂಡವು.

ಪೂಜ್ಯ ಶ್ರೀ ಶ್ರೀ ಶಿವರುದ್ರ ಸ್ವಾಮಿಗಳು ನೆಲ್ಲಿಗೆರೆ ಮಠಕ್ಕೆ ಹೋಗಿ ಅಧಿಕಾರವನ್ನು ವಹಿಸಿಕೊಂಡಾಗ ಮಠವು ಶಿಥಿಲಾವಸ್ಥೆಯಲ್ಲಿತ್ತು. ಆ ಪ್ರದೇಶದ ಜನ ಮುಗ್ಧತೆಯಿಂದ ಜೀವನ ನಡೆಸುತ್ತಿದ್ದರು. ಸುತ್ತಲೂ ಅನಕ್ಷರಸ್ಥರು ತುಂಬಿಕೊಂಡಿದ್ದರು. ಪೂಜ್ಯ ಸ್ವಾಮಿಗಳು ತಮ್ಮ ಸರಳತೆ, ಸಜ್ಜನಿಕೆ, ಹೃದಯ ವೈಶ್ಯಾಲತೆ, ಅಂತಃಕರಣದಿಂದ, ಚಾಕಚಕ್ಯತೆಯಿಂದ ಜನರ ಮನಸ್ಸನ್ನು ಸೂಜಿಗಲ್ಲಿನಂತೆ ತಮ್ಮ ಕಡೆ ಸೆಳೆದುಕೊಂಡರು. ಅವರ ಹೃದಯ ಪರಿವರ್ತನೆ ಮಾಡಲು ಪ್ರಯತ್ನ ಮಾಡಿದರು. ಆ ಪ್ರದೇಶದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದರು. ಹಿರಿಯರನ್ನು ಮನವೊಲಿಸಿ ಅನೇಕ ಮಕ್ಕಳಿಗೆ ತಾವೇ ಬಸ್‌ಚಾರ್ಜ್ ಕೊಟ್ಟು ಸಿದ್ಧಗಂಗಾ ಮಠ, ಸುತ್ತೂರು ಮಠಗಳಿಗೆ ಕಳುಹಿಸಿ ಓದಿಸಿದರು. ಮನೆಯಲ್ಲಿ ಒಬ್ಬ ಓದಿ ವಿದ್ಯಾವಂತನಾದರೆ, ಸಂಸ್ಕಾರವಂತನಾದರೆ, ಇಡೀ ಕುಟುಂಬವೇ ಪ್ರಗತಿ ಹೊಂದುತ್ತದೆ ಎಂಬುದನ್ನು ಬಲ್ಲವರಾಗಿದ್ದರು. ಜನರ ಬಾಳು ಹಸನಾಗಲಿ ಎಂಬ ಸದುದ್ದೇಶದಿಂದ ಅವರು ಅನುಸರಿಸಿದ ಮಾರ್ಗದಿಂದ ಪ್ರಭಾವಿತರಾದ ಆ ಭಾಗದ ಜನರ ಪಾಲಿಗೆ ಬೆಳಗುವ ಬಾಸ್ಕರರಾದರು. ತಮ್ಮನ್ನು ಉದ್ಧರಿಸಲು ಬಂದ ಪವಾಡ ಪುರುಷರೆಂದೇ ಭಾವಿಸಿದರು. ಅವರಲ್ಲಿ ಭಗವಂತನನ್ನು ಕಂಡರು. ಪೂಜ್ಯರು ಶಿಥಿಲಗೊಂಡಿದ್ದ ಮಠವನ್ನು ಜೀರ್ಣೋದ್ಧಾರ ಮಾಡಬೇಕೆಂದು ನಿರ್ಧರಿಸಿದಾಗ ಜನರೆಲ್ಲ ಒಗ್ಗೂಡಿ ತನು ಮನ ಧನಗಳನ್ನು ಅರ್ಪಿಸಿ ಕೆಲಸ ಪೂರ್ಣಗೊಳ್ಳುವಂತೆ ಮಾಡಿದರು. ಭಕ್ತರ ಪ್ರೀತಿ-ವಿಶ್ವಾಸ, ನಂಬಿಕೆಯನ್ನು ಗಳಿಸಿದ ಪೂಜ್ಯರು ಅವರೆಲ್ಲರ ಸಹಕಾರದಿಂದ ಶ್ರೀಮಠದ ಅನೇಕ ಜನಹಿತ ಕಾರ್ಯಗಳನ್ನು ಆಗು ಮಾಡಿದರು. ಅಲ್ಲದೆ ಅನೇಕ ಧಾರ್ಮಿಕ

ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಯುವಂತೆ ಮಾಡಿದರು. ಈ ಕಾರ್ಯಕ್ರಮಗಳಿಗೆ ವಿವಿಧ ಮಠಗಳ ಹರುಗುರು ಚರಮೂರ್ತಿಗಳನ್ನು ಬರಮಾಡಿಕೊಂಡು ಚಂದಗೊಳಿಸುವುದರ ಮೂಲಕ ಎಲ್ಲರ ಗಮನವನ್ನು ಸೆಳೆದರು.

**ಶ್ರೀ ದೇಗುಲಮಠದ ಉತ್ತರಾಧಿಕಾರಿಯಾಗಿ:** ಶ್ರೀ ದೇಗುಲಮಠದ ಪೀಠಾಧ್ಯಕ್ಷರಾಗಿದ್ದ ಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರಿಗೆ ಶ್ರೀ ದೇಗುಲಮಠದ ಅಭಿವೃದ್ಧಿಯನ್ನು ಮತ್ತಷ್ಟು ವಿಸ್ತರಿಸಬೇಕು ಎಂಬ ಕಾಳಜಿ, ಹಂಬಲ, ಆಶಯವಿದ್ದರೂ, ಅವರ ಆರೋಗ್ಯ ಆಗಾಗ್ಗೆ ಹದಗೆಡುತ್ತಿತ್ತು. ರೋಗಗಳು ಅವರ ದೇಹದಲ್ಲಿ ಆಶ್ರಯ ಪಡೆದು ತೊಂದರೆ ಕೊಡಲಾರಂಭಿಸಿದವು. ಆದಷ್ಟು ಬೇಗ ಶ್ರೀಮಠಕ್ಕೆ ಉತ್ತರಾಧಿಕಾರಿಯನ್ನು ನೇಮಕ ಮಾಡಬೇಕೆಂದು ನಿಶ್ಚಿಯಿಸಿ ಶ್ರೀ ಸಿದ್ಧಗಂಗಾ ಮಠಕ್ಕೆ ಹೋಗಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಲ್ಲಿ ಬಿನ್ನವಿಸಿಕೊಂಡರು. ಪೂಜ್ಯರ ಸಲಹೆಯಂತೆ ಹಲವಾರು ವರ್ಷಗಳಿಂದ ಪರಿಚಯವಿದ್ದ ಮಳವಳ್ಳಿ ತಾಲ್ಲೂಕಿನ ನೆಲ್ಲಿಗೆರೆ ಮಠದ ಮಠಾಧ್ಯಕ್ಷರಾಗಿದ್ದ ಪೂಜ್ಯ ಶ್ರೀ ಶ್ರೀ ಶಿವರುದ್ರ ಸ್ವಾಮಿಗಳನ್ನು ಆಯ್ಕೆ ಮಾಡಿ ಫೆಬ್ರವರಿ ೧೨, ೧೯೮೮ ರಂದು ವಿದ್ಯುಕ್ತವಾಗಿ ನಿರಂಜನ ಪಟ್ಟಾಧಿಕಾರ ಮಾಡಿ, 'ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು' ಎಂಬ ನೂತನ ಅಭಿಧಾನ ಮಾಡಿ ಆಶೀರ್ವದಿಸಿದರು. ನಿರಂಜನ ಪಟ್ಟಾಧಿಕಾರ ಮಹೋತ್ಸವ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯಲ್ಲಿ ಅಭೂತಪೂರ್ವವಾಗಿ ನಡೆಯಿತು. ಸಮಾರಂಭದಲ್ಲಿ ವಿವಿಧ ಮಠಗಳ ಹರುಗುರು ಚರಮೂರ್ತಿಗಳು, ರಾಜಕಾರಣಿಗಳು, ಗಣ್ಯರು, ಭಕ್ತರು, ಅಭಿಮಾನಿಗಳು ಸೇರಿದಂತೆ ಲಕ್ಷಾಂತರ ಜನರು ಸಾಕ್ಷಿಯಾಗಿದ್ದರು

ಪರಮಪೂಜ್ಯ ಶ್ರೀ ಶ್ರೀ ಮಹಾಲಿಂಗ ಮಹಾಸ್ವಾಮಿಗಳು, ಪೂಜ್ಯ ಶ್ರೀ ಶ್ರೀ ಮುಮ್ಮಡಿ ಸ್ವಾಮಿಗಳವರನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದ ನಂತರ ಅವರಿಗೆ ಶ್ರೀಮಠದ ಕಾರ್ಯಗಳ ಬಗ್ಗೆ ಪರಿಚಯ ಮಾಡಿಕೊಟ್ಟು ಮಾರ್ಗದರ್ಶನ ಮಾಡುತ್ತಾ ಬಂದಿದ್ದರು. ಕ್ರಿಯಾಶೀಲತೆ, ಕರ್ತೃತ್ವ ಶಕ್ತಿಯುಳ್ಳ ಹೃದಯ ವೈಶಾಲ್ಯತೆಯಿಂದ ಕೂಡಿದ, ತಮ್ಮ ಶಿಷ್ಯರ ಕರ್ತವ್ಯ ನಿಷ್ಠೆಯನ್ನು ಕಂಡು ನೆಮ್ಮದಿಯ ನಿಟ್ಟಿಸಿರು ಬಿಟ್ಟರು. ಹಾಗೆಯೇ ಅವರ ಬಗ್ಗೆ ಅಭಿಮಾನಪಟ್ಟರು.

ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ತಮ್ಮ ಗುರುಗಳು ಜೀವನದ ಅಂತಿಮ ಕ್ಷಣದಲ್ಲಿ ಹೇಳಿದಂತೆ ಶ್ರೀ ದೇಗುಲಮಠದ ಗುರುಪರಂಪರೆಯ ಆಶೀರ್ವಾದದಿಂದ ಪರಮಪೂಜ್ಯ ಶ್ರೀ ಶ್ರೀ ಮಹಾಲಿಂಗ ಮಹಾಸ್ವಾಮಿಗಳವರು ಪ್ರಾರಂಭಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಸಾಕಾರಗೊಳಿಸುತ್ತಾ ಬಂದಿದ್ದರು.

ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಶ್ರದ್ಧಾಪೂರ್ವಕ ಆರೈಕೆಯಿಂದ ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರ ಕ್ಷೀಣಿಸುತ್ತಿದ್ದ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿತು. ಮತ್ತೆ ಅವರಿಗೆ ಗುರುಗಳ ಸೇವೆ ಸಲ್ಲಿಸುವ ಸದಾವಕಾಶ ಹಾಗೂ ಮಾರ್ಗದರ್ಶನಗಳು ದೊರೆಯಿತು. ಅಪಾರ ಅನುಭವ ಹಾಗೂ ಅನುಭಾವದ ಶ್ರೀಮಂತಿಕೆಯ ಗಣಿಯು ಉತ್ಸಾಹಭರಿತ ಚೇತನಕ್ಕೆ ತೆರೆದುಕೊಂಡಿತು. ಗುರುಗಳು ಶ್ರೀಮಠದ ಆಚಾರ-ವಿಚಾರ-ಸಂಪ್ರದಾಯಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಅತ್ಯಲ್ಪ ಕಾಲದಲ್ಲಿಯೇ ಗುರು ಶಿಷ್ಯರ ಸಂಬಂಧ ಎಷ್ಟು ಅನ್ಯೋನ್ಯವಾಗಿತ್ತೆಂದರೆ ಗುರುಗಳು ಬಾಯಿಬಿಟ್ಟು ಹೇಳುವುದರೊಳಗೆ ಶಿಷ್ಯ ಆ ಯೋಜನೆಯ ರೂಪರೇಷೆಗಳನ್ನು ಸಿದ್ಧಪಡಿಸಿ ಅದರ ಸಾಧಕ ಬಾಧಕಗಳ ಬಗ್ಗೆ ಕುರಿತು ಮುಕ್ತವಾಗಿ ಚರ್ಚಿಸಿ ಒಮ್ಮತಕ್ಕೆ ಬರುತ್ತಿದ್ದರು. ಹಳೆಬೇರು, ಹೊಸ ಚಿಗುರು ಮೇಳೈಸಿ ಮರವು ಸೊಗಸುವಂತೆ ಎರಡು ದಿವ್ಯ ಶಕ್ತಿಗಳು

ಒಂದೂಗೂಡಿ ಶ್ರೀಮಠದ ಅಭಿವೃದ್ಧಿ ಉಜ್ವಲವಾಗುವಂತೆ ಕ್ರಿಯಾತ್ಮಕ ಯೋಜನೆಗಳನ್ನು ರೂಪಿಸಿದವು. ಪರಮಪೂಜ್ಯ ಶ್ರೀ ಶ್ರೀ ಮಹಾಲಿಂಗ ಸ್ವಾಮಿಗಳು ತಾವು ಸಾಕ್ಷಾತ್ಕರಿಸಿಕೊಂಡಿದ್ದ ಎಲ್ಲಾ ಆಧ್ಯಾತ್ಮಿಕ ಶಕ್ತಿಯನ್ನು ವ್ಯವಹಾರ ಜ್ಞಾನವನ್ನು ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರಿಗೆ ಧಾರೆ ಎರೆದರು.

ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರಿಗೆ ಗುರುಗಳ ಮಾತೆಂದರೆ ವೇದವಾಕ್ಯ. ಗುರುಗಳು ಒಡ್ಡಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅಹರ್ನಿಶಿ ಸೇವೆಯಲ್ಲಿ ಸಮರ್ಪಣಾಭಾವದಿಂದ ತೊಡಗಿಸಿಕೊಂಡರು. ಈ ಸಂದರ್ಭದಲ್ಲಿ ಗುರುವಿನ ಹಿರಿಮೆಯನ್ನು ಕುರಿತು ಶರಣೆ ಮುಕ್ತಾಯಕ್ಕ ತನ್ನ ವಚನದಲ್ಲಿ ಅರ್ಥಪೂರ್ಣವಾಗಿ ಹೇಳಿದ್ದಾಳೆ –

**ಗುರು ವಾಕ್ಯದಿಂದಲ್ಲದೆ ಗುರುವನರಿಯಬಾರದು,**
**ಗುರು ವಾಕ್ಯದಿಂದಲ್ಲದೆ ಲಿಂಗವನರಿಯಬಾರದು,**
**ಗುರು ವಾಕ್ಯದಿಂದಲ್ಲದೆ ಜಂಗಮವನರಿಯಬಾರದು,**
**ಗುರು ವಾಕ್ಯದಿಂದಲ್ಲದೆ ತನ್ನನರಿಯಬಾರದು,**
**ಹಿಂದಣ ಜನ್ಮದಲ್ಲಿ ಗುರುವಾಕ್ಯವಿಡಿದು ಗುರುವ ಪೂಜೆಗೆ**
**ಇಂದು ಜ್ಞಾನೋದಯವಾದರೆ ಜ್ಞಾನವಾಯಿತೆಂದು**
**ಗುರುವಾಕ್ಯವ ಮೀರಿ ಆಯಿತೆನ್ನಬಹುದೆ**
**ತನ್ನಲ್ಲಿ ತಾನು ಸನ್ನಿಹಿತವಾದನೆಂದಡೆ,**
**ಗುರುವಿಲ್ಲದೆ ಆಗದು ಕೇಳು ಎನ್ನ ಅಜಗಣ್ಣ**
**ಗುರುವಿಂದಲ್ಲದೆ ಆರೂಢರ ಕೂಟವು ಸ್ವಯವಾಗದು ಕೇಳಾ.**


ಶ್ರೀ.ಮ.ನಿ.ಪ್ರ.ಸ್ವ.ಡಾ|| ಶ್ರೀ ಶ್ರೀ ಮುಮ್ಮಡಿನಿರ್ವಾಣಮಹಾಸ್ವಾಮಿಗಳು
ಶ್ರೀ ದೇಗುಲಮಠ, ಕನಕಪುರ

ಗುರುಗಳ ಆಶೀರ್ವಾದ ಹಾಗೂ ಮಾರ್ಗದರ್ಶನದಿಂದ ಶ್ರೀಮಠದ ಅಭಿವೃದ್ಧಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶ್ರೀಗಳವರು ಬೆಳೆದ ಪರಿಸರದ ಪ್ರಭಾವದಿಂದ, ಹುಟ್ಟಿನಿಂದ ಬಂದ ಸಾತ್ವಿಕ ಗುಣದಿಂದ, ತಮಗೆ ಒದಗಿದ ಸಂಪರ್ಕದಿಂದಾಗಿ ದೇಹಕ್ಕೆ ಕಾವಿ ಧರಿಸುವ ಮುನ್ನವೇ ಮನಸ್ಸಿಗೆ ಕಾವಿ ಹೊದಿಸಿದ್ದರು. ಧಾರ್ಮಿಕ ಆಚಾರ–ವಿಚಾರಗಳಲ್ಲಿ, ಸಾಮಾಜಿಕ ನಡಾವಳಿಗಳಲ್ಲಿ ಅವರು ಸಿದ್ಧಹಸ್ತರಾಗಿದ್ದರು. ಪರಿಶುದ್ಧ ಜೀವನದ ಕ್ರಿಯಾಮೂರ್ತಿಯಾಗಿದ್ದರು. ಕಾರುಣ್ಯಮೂರ್ತಿಯಾಗಿದ್ದರು. ಬಂಗಾರದ ಹೂವಿಗೆ ಪರಿಮಳ ಮೂಡುವಂತೆ ಸಿದ್ಧಗಂಗೆಯ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳು ಹಾಗೂ ದೇಗುಲಮಠದ ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರ ಕಣ್ಣಿರಿಕೆಯಲ್ಲಿ ತರಬೇತಿ ಹೊಂದಿ ಅನುಗ್ರಹಕ್ಕೆ ಪಾತ್ರರಾಗಿ ತಮ್ಮ ಅನುಪಮ ವ್ಯಕ್ತಿತ್ವಕ್ಕೆ ದಿವ್ಯಪ್ರಭೆಯನ್ನು ದೊರಕಿಸಿಕೊಂಡರು.

**ಶಿಕ್ಷಣ ಕ್ಷೇತ್ರ:** ಯಾವುದೇ ದೇಶದ ಅಭಿವೃದ್ಧಿ ಆ ದೇಶದ ಸಾಕ್ಷರತೆಯ ಮೇಲೆ ಅವಲಂಬಿತವಾಗಿರುತ್ತದೆ. ಅಜ್ಞಾನ, ಮೂಢನಂಬಿಕೆ, ದಾರಿದ್ರ್ಯಗಳಿಗೆ ಮೂಲಕಾರಣ ಅನಕ್ಷರತೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಗಾಂಧೀಜಿಯವರು ಅನಕ್ಷರತೆಯನ್ನು ಮಾನವನ ಶತ್ರು ಎಂದು ಪ್ರತಿಪಾದಿಸಿದ್ದರು. ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಭಕ್ತರ ಸಹಾಯ, ಸಹಕಾರದಿಂದ 'ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ'ದ ಮೂಲಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಗುರುಗಳು ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಯನ್ನು ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಮತ್ತಷ್ಟು ವಿಸ್ತರಿಸಿಕೊಂಡು ಬಂದಿದ್ದರು.



'ದೇಗುಲ ಸಿರಿ' ಸಂಪಾದಕರಾದ ಎಚ್.ಎಸ್.ಸಿದ್ಧಗಂಗಪ್ಪ ಅವರಿಗೆ ಪರಮಪೂಜ್ಯ ಶ್ರೀ ಶ್ರೀಗಳವರಿಂದ ಸನ್ಮಾನ ಈ ಸಂದರ್ಭದಲ್ಲಿ ಗೀತಾಂಜಲಿ ಗ್ರಾಫಿಕ್ಸ್‌ನ ಮಾಲೀಕರಾದ ಶ್ರೀ ಜಿ.ನಾಗಸುಂದರ್ ಹಾಗೂ ಶ್ರೀ ಎಂ.ರೇಣುಕಾರಾಧ್ಯ ಅವರು ಉಪಸ್ಥಿತರಿದ್ದರು.

**ಕೃಷಿಕ್ಷೇತ್ರ:** ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಹಿಂದಿನ ಗುರುಗಳಾಗಿದ್ದ ಪೂಜ್ಯ ಶ್ರೀ ಶ್ರೀ ಇಮ್ಮಡಿ ನಿರ್ವಾಣ ಮಹಾಸ್ವಾಮಿಗಳವರಂತೆ ಕೃಷಿಯಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದ್ದರು. ಮಠಕ್ಕೆ ಸೇರಿದ ಭೂಮಿಯಲ್ಲಿ ಕೃಷಿ ಮಾಡುತ್ತಾ ಬೆಳೆಯನ್ನು ಪಡೆಯುತ್ತಿದ್ದರು. ಕೃಷಿ ಕ್ಷೇತ್ರದಲ್ಲಿಯೂ ಸಹ ಹಲವಾರು ಸುಧಾರಣೆಗಳನ್ನು ತಂದರು. ಆಧುನಿಕ ಕೃಷಿ ಪದ್ಧತಿಯನ್ನು ಅನುಷ್ಠಾನಕ್ಕೆ ತಂದು, ಟ್ರ್ಯಾಕ್ಟರ್ ಮೊದಲಾದ ಯಾಂತ್ರೀಕೃತ ಸಲಕರಣೆಗಳನ್ನು ಉಪಯೋಗಿಸ ತೊಡಗಿದ್ದರು. ಸಾಂಪ್ರದಾಯಿಕ ಬೆಳೆಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ಅರಿಶಿಣ, ಶುಂಠಿ, ಬಾಳೆ ಮೊದಲಾದವುಗಳನ್ನು ಬೆಳೆಯುತ್ತಿದ್ದರು. ಕೃಷಿಯಲ್ಲಿ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡ ಪರಿಣಾಮವಾಗಿ ಒಂದು ವರ್ಷ ೨೫೦ ಕ್ವಿಂಟಾಲ್ ಅರಿಶಿನದ ಇಳುವರಿ ಪಡೆದು ದಾಖಲೆ ಸ್ಥಾಪಿಸಿದ್ದರಿಂದ ಸರ್ಕಾರದ ಕೃಷಿ ಇಲಾಖೆ ಈ ಸಾಧನೆಗೆ ಪ್ರಶಸ್ತಿ ನೀಡಿ ಗೌರವಿಸಿತ್ತು. ಜೊತೆಗೆ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಿದ್ದರು. ಈ ಮೂಲಕ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ದಾಸೋಹದ ಖರ್ಚಿಗೆ ಮಠದ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸುವ ಯೋಜನೆಗಳನ್ನು ಪೂಜ್ಯ ಶ್ರೀಗಳವರು ಕೈಗೊಂಡಿದ್ದರು. ಕೃಷಿ ಕಾಯಕದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುವುದರ ಮೂಲಕ ಅವರಲ್ಲಿ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಬೆಳೆಯುವಂತೆ ಮಾಡಿದ್ದರು.

**ಜನಜಾಗೃತಿ:** ಜನರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವಿನ ದಿಗಂತವನ್ನು ವಿಸ್ತರಿಸುವ ಸದುದ್ದೇಶ ಹಾಗೂ ದೂರದೃಷ್ಟಿಯಿಂದ ಶ್ರೀಮಠದಲ್ಲಿ ನಿರಂತರವಾಗಿ ಒಂದಲ್ಲ ಒಂದು ಕಾರ್ಯಕ್ರಮ ಆಯೋಜಿಸುತ್ತಿದ್ದರು. ಈ ಕಾರ್ಯಕ್ರಮಗಳಿಗೆ ದೇಶದ ನಾನಾ ಭಾಗಗಳಿಂದ ವಿದ್ವಾಂಸರನ್ನು, ಕಲಾವಿದರನ್ನು ಆಹ್ವಾನಿಸಿ ಧರ್ಮ–ಸಂಸ್ಕೃತಿ,

ಕಲೆ ಹೀಗೆ ಅನೇಕ ಹೊಸ ಹೊಸ ವಿಚಾರಗಳು ಹಾಗೂ ಮನರಂಜನೆಯು ದೊರೆಯುವಂತೆ ಉತ್ತಮ ಕಾರ್ಯಕ್ರಮಗಳು ನಡೆಯುವಂತೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಬಿಜಾಪುರದ ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಂದ ಆಧ್ಯಾತ್ಮಿಕ ಪ್ರವಚನವನ್ನು ತಿಂಗಳು ಗಟ್ಟಳೆ ಏರ್ಪಡಿಸಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

**ನ್ಯಾಯದೇಗುಲ:** ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ನಡೆಸಿಕೊಂಡು ಬಂದಿದ್ದ ನ್ಯಾಯ ತೀರ್ಮಾನದ ಸತ್ಸಂಪ್ರದಾಯವನ್ನು ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಮುಂದುವರಿಸಿಕೊಂಡು ಬಂದಿದ್ದರು. ಶ್ರೀಮಠದ ನ್ಯಾಯಾಲಯದಲ್ಲಿ ಪೂಜ್ಯ ಶ್ರೀಗಳೇ ನ್ಯಾಯಾಧೀಶರು. ಈ ನ್ಯಾಯಾಧೀಶರು ನೀಡುವ ತೀರ್ಪನ್ನು ಎರಡು ಕಡೆಯವರು ಒಪ್ಪಿಕೊಳ್ಳಬೇಕು. ಇಲ್ಲಿ ಪೂಜ್ಯರು ನ್ಯಾಯಪೀಠದಲ್ಲಿ ಕುಳಿತು ಒಡೆದ ಮನಸ್ಸುಗಳನ್ನು ಒಂದುಗೂಡಿಸುವ ಸಾರ್ಥಕ ಕೆಲಸವನ್ನು ಮಾಡುತ್ತಿದ್ದರು. ನ್ಯಾಯ ಬೇಡಿ ಬಂದವರಿಗೆ ಸಹಬಾಳ್ವೆಯ ಮಹಾತತ್ತ್ವವನ್ನು ಮನವರಿಕೆ ಮಾಡಿಕೊಡುತ್ತಿದ್ದರು. ಮನಸ್ಸಿನಲ್ಲಿ ದ್ವೇಷ, ಮತ್ಸರ ತುಂಬಿಕೊಂಡು, ಮುಖ ಸಪ್ಪಗೆ ಮಾಡಿಕೊಂಡು, ಲೋಕದ ಎಲ್ಲಾ ನೋವು ತನಗೆ ಬಂದಿದೆ ಎಂದು ಬಸವಳಿದು ಬಂದ ಜನರನ್ನು ಕರುಣಾಳುಗಳು, ಕಾರುಣ್ಯಮೂರ್ತಿಗಳವರ ಒಂದು ಮುಗುಳ್ನಗೆ ಬಂದವರ ಮನಸ್ಸನ್ನು ನಿರಾಳವಾಗಿಸಿ ಬಿಡುತ್ತಿತ್ತು. ನ್ಯಾಯಬೇಡಿ ಬಂದ ಜನರು ಮಂತ್ರ ಮುಗ್ಧರಾಗಿ ತಮಗರಿವಿಲ್ಲದೆ ಪೂಜ್ಯರಿಗೆ ಶರಣಾಗುತ್ತಿದ್ದರು. ಎತ್ತಿದ ತಲೆ ಬಾಗುತ್ತದೆ, ಅಂಥ ಮಾಂತ್ರಿಕ ಶಕ್ತಿ ಪೂಜ್ಯರ ತೇಜಃಪೂರ್ಣ ವ್ಯಕ್ತಿತ್ವ ಅನುಪಮವಾದುದು.

**ದೇಶ-ವಿದೇಶ ಪ್ರವಾಸ: 'ಕೋಶ ಓದಿ ನೋಡು, ದೇಶ ತಿರುಗಿ ನೋಡು'** ಎಂಬುದು ಜನಪ್ರಿಯ ಗಾದೆ. ಕೋಶ ಓದುವುದರಿಂದ ಪುಸ್ತಕ ಜ್ಞಾನ, ದೇಶ ತಿರುಗುವುದರಿಂದ ಪ್ರತ್ಯಕ್ಷ ಜ್ಞಾನ, ಪುಸ್ತಕ ಜ್ಞಾನ ಅರಿವಾದರೆ, ಪ್ರತ್ಯಕ್ಷ ಜ್ಞಾನ ಅನುಭವ. ಇವೆರೆಡೂ ಬದುಕಿಗೆ ಪೂರಕ. ಪ್ರವಾಸ ಒಂದು ರೀತಿಯಲ್ಲಿ ಶಿಕ್ಷಣವಿದ್ದಂತೆ. ಮಾನವೀಯ ಮೌಲ್ಯಗಳ ಅರಿವು ಮೂಡಬೇಕಾದರೆ ಪ್ರವಾಸ ಮಾಡಬೇಕು. ಪ್ರವಾಸದಿಂದ ನಮ್ಮ ದೃಷ್ಟಿ ವಿಶಾಲವಾಗುತ್ತದೆ. ಜ್ಞಾನ ಹೆಚ್ಚಾಗುತ್ತದೆ, ಅನುಭವವಾಗುತ್ತದೆ. ಪ್ರವಾಸಕ್ಕೆ ಮಾಡಿದ ವೆಚ್ಚ ನಮ್ಮ ಬದುಕಿಗೆ ಹೂಡಿದ ಬಂಡವಾಳ!

ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ಪೀಠಾಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಎರಡು ಬಾರಿ ದೇಶದ ವಿವಿಧ ಶಿವಕ್ಷೇತ್ರಗಳಿಗೆ ಭೇಟಿ ನೀಡಿದ್ದರು. ವಿವಿಧ ಮಠಗಳಿಗೆ ಭೇಟಿ ನೀಡಿ ಪೂಜ್ಯರುಗಳೊಂದಿಗೆ ವಿಚಾರ ವಿನಿಮಯ ಮಾಡಿ ಶ್ರೀದೇಗುಲಮಠಕ್ಕೆ ವಿವಿಧ ಮಠಗಳ ನಡುವೆ ಆತ್ಮೀಯ ಬಾಂಧವ್ಯ, ಸೌಹಾರ್ದತೆ ಇರುವಂತೆ ಮಾಡಿದ್ದರು.

ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ತಮಗೆ ಬಿಡುವಿಲ್ಲದ ಕಾರ್ಯಭಾರದ ನಡುವೆಯೂ ದೇಶ-ವಿದೇಶಗಳ ಪ್ರವಾಸ ಮಾಡುವುದರ ಮೂಲಕ ತಮ್ಮ ಲೋಕಾನುಭವ ಶ್ರೀಮಂತಿಕೆಯನ್ನು ತಮ್ಮದಾಗಿಸಿಕೊಂಡಿದ್ದರು. ಶ್ರೀ ಸುತ್ತೂರು ವೀರಸಿಂಹಾಸನದ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಯೋಜಿಸಿದ್ದ ಅಮೇರಿಕಾ, ಯುರೋಪ್ ಮೊದಲಾದ ಐರೋಪ್ಯ ರಾಷ್ಟ್ರಗಳ ಪ್ರವಾಸ ಮಾಡಿದ್ದರು. ತಾವು ಸಂದರ್ಶಿಸಿದ ರಾಷ್ಟ್ರಗಳ ಜನತೆಯ ಶಿಸ್ತು, ಸಮಯಪಾಲನೆ, ಕಾರ್ಯತತ್ಪರತೆ, ಕಷ್ಟ ಸಹಿಷ್ಣುತೆ, ದೇಶ ಪ್ರೇಮ, ಸ್ವಚ್ಛತೆ, ಪರಿಸರ ನೈರ್ಮಲ್ಯ, ಶ್ರೀಗಳವರ ಮೇಲೆ ಗಾಢವಾದ ಪ್ರಭಾವ ಬೀರಿದವು. ನಮ್ಮ ಜನರೂ ಇಂತಹ ಗುಣಗಳನ್ನು ಮೈಗೂಡಿಸಿಕೊಂಡರೆ ದೇಶದ ಕೀರ್ತಿ ಮತ್ತಷ್ಟು ಹೆಚ್ಚುತ್ತದೆ ಎಂಬ ಅಭಿಪ್ರಾಯವನ್ನು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಡಿಸುತ್ತಿದ್ದರು.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಶ್ರೀ ಸುತ್ತೂರು ಜಗದ್ಗುರುಗಳು ಏರ್ಪಡಿಸಿದ್ದ **'ಭಾರತ ದರ್ಶನ ಯಾತ್ರೆ'**ಯಲ್ಲಿ ಸುಮಾರು ೧೫೦೦ ವಿವಿಧ ಮಠಗಳ ಹರಗುರು ಚರಮೂರ್ತಿಗಳೊಂದಿಗೆ ಎರಡು ವಾರಗಳ ಕಾಲ ಪ್ರವಾಸದಲ್ಲಿ ಕಾಶಿ, ಮಥುರಾ, ಕೇದಾರ, ಪ್ರಯಾಗ, ಹರಿದ್ವಾರ, ಋಷಿಕೇಶ, ಆಗ್ರ, ದೆಹಲಿ, ಜೈಪುರ, ಮುಂಬೈ ಮೊದಲಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದ್ದರು. ತಾವು ಪಡೆದ ಅನುಭವವನ್ನು ಶ್ರೀಮಠದ ಅಭಿವೃದ್ಧಿಯಲ್ಲಿ ಬಳಸಿಕೊಂಡಿದ್ದರು.

ಪರಮಪೂಜ್ಯರ ಘನಶಿವ ವ್ಯಕ್ತಿತ್ವವನ್ನು ಕುರಿತು ಬರೆಯುವಾಗ ಶರಣ ಆದಯ್ಯನ ವಚನ ನೆನಪಿಗೆ ಬರುತ್ತದೆ.



**ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ**
**ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷ**
**ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ**
**ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ**
**ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗ ಬೇರಿಲ್ಲ.**

ಮೋಹ, ಅಹಂಕಾರ, ಭಯ, ಅಪೇಕ್ಷೆ, ಭಾವ, ವಿಷಯ ಇವುಗಳಿಂದ ಮುಕ್ತನಾಗಿ, ಜ್ಞಾನದಲ್ಲಿ ಪರಮಾನಂದ ತುಂಬಿಕೊಂಡ ದೈವೀಗುಣ ಸಂಪನ್ನರು ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು.

**ಪೂಜ್ಯ ಶ್ರೀಗಳವರ ಜೀವನದಲ್ಲಿ ಮರೆಯಲಾಗದ ಘಟನೆ:** ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ವಯಸ್ಸು ಹಾಗೂ ಕಾರ್ಯದ ಒತ್ತಡದಿಂದ ಶ್ರೀಮಠಕ್ಕೆ ಸೂಕ್ತ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂಬ ಆಶಯದಿಂದ ಶ್ರೀಮಠದ ಭಕ್ತರೊಂದಿಗೆ ಸೆಪ್ಟೆಂಬರ್ ೧೫, ೧೯೯೭ ರಂದು, ಶ್ರೀ ಸಿದ್ಧಗಂಗಾ ಮಠಕ್ಕೆ ಹೋಗಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಲ್ಲಿ ಶ್ರೀ ದೇಗುಲಮಠಕ್ಕೆ ಸೂಕ್ತ ವಟುವನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿದರು. ಉಭಯ ಶ್ರೀಗಳವರು ಸಮಸ್ತ ಭಕ್ತರೊಂದಿಗೆ ಸಮಾಲೋಚಿಸಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಆಧ್ಯಾತ್ಮಕತೆಯನ್ನು ರೂಢಿಸಿಕೊಂಡ ಶ್ರೀ ರೇಣುಕೇಶ್ ಅವರನ್ನು ಮಾರ್ಚ್ ೨೫, ೧೯೯೮ ರಂದು, ನಿರಂಜನ ಪಟ್ಟಾಧಿಕಾರ ನೆರವೇರಿಸಿ, 'ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು' ಎಂದು ಅಭಿಧಾನದಿಂದ ದೇಗುಲಮಠದ ಉತ್ತರಾಧಿಕಾರಿಯನ್ನಾಗಿ ಮಾಡಿದರು. ಅವರು ಶ್ರೀಮಠದ ಸರ್ವತೋಮುಖ ಅಭಿವೃದ್ಧಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅನಾರೋಗ್ಯದಿಂದ ತಮ್ಮ ೪೫ನೇ ವಯಸ್ಸಿನಲ್ಲಿ ಮೇ ೨೧, ೨೦೧೨ ರಂದು, ಲಿಂಗೈಕ್ಯರಾದರು. ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರಿಗೆ ಬರಸಿಡಿಲು ಎರಗಿದಂತಾಯಿತು. ಆ ಅಘಾತದಿಂದ ಹೊರಬರಲು ತುಂಬಾ ಸಮಯವಿಡಿಯಿತು. ಇದು ಮಠದ ಇತಿಹಾಸದಲ್ಲಿ ಮರೆಯಲಾಗದ ನೋವಿನ ಘಟನೆ.

**ಪರಮಪೂಜ್ಯ ಶ್ರೀ ಶ್ರೀಗಳವರಿಗೆ ಮಂಡಿನೋವಿಗೆ ಶಸ್ತ್ರಚಿಕಿತ್ಸೆ :** ಕಳೆದ ಐದು ವರ್ಷಗಳಿಂದ ಎರಡೂ ಕಾಲುಗಳ ಮಂಡಿ ನೋವಿನ ಚಿಕಿತ್ಸೆಗೆ ಒಳಗಾಗಿದ್ದರು, ಶಸ್ತ್ರ ಚಿಕಿತ್ಸೆ ಯಶಸ್ವಿಯಾಗದೆ ತುಂಬಾ ನೋವು ಅನುಭವಿಸಿದರು. ಆ ನೋವಿನಲ್ಲೂ ಶ್ರೀಮಠದ ಅಭಿವೃದ್ಧಿ ಕಡೆಗೆ ಗಮನ ಕೊಡುತ್ತಿದ್ದರು. ತಮ್ಮ ಕರಕಮಲ ಸಂಜಾತರಾದ ಪೂಜ್ಯ ಡಾ. ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರಿಗೆ ಮಾರ್ಗದರ್ಶನ ನೀಡುತ್ತಿದ್ದರು. ದೇಹಕ್ಕೆ ನೋವಾಗಿದ್ದರು, ಚೈತನ್ಯ ಕುಂದಿರಲಿಲ್ಲ. ಕೊನೆ ಗಳಿಗೆಯವರೆಗೂ ಶ್ರೀಮಠದ ಬಗ್ಗೆಯೇ ಚಿಂತನೆ ಮಾಡುತ್ತಿದ್ದರು.

# ವಿವಿಧ ಮಠಗಳ ಮಠಾಧೀಶರಿಂದ ಅಂತಿಮ ದರ್ಶನ














# ಗಣ್ಯರಿಂದ ಅಂತಿಮ ದರ್ಶನ













# ಗಣ್ಯರಿಂದ ಅಂತಿಮ ದರ್ಶನ














**ಅಂತಿಮ ದರ್ಶನ ಪಡೆದ ಪೂಜ್ಯರು ಮತ್ತು ಗಣ್ಯರು :** ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಲಿಂಗೈಕ್ಯರಾದ ಸುದ್ದಿ ಭಕ್ತರಿಗೆ, ಅಭಿಮಾನಿಗಳಿಗೆ ಬರಸಿಡಿಲು ಎರಗಿದಂತಾಯಿತು. ಗಣ್ಯರು, ಭಕ್ತರು ಆಸ್ಪತ್ರೆಗೆ ಧಾವಿಸಿ ಅಂತಿಮ ದರ್ಶನ ಪಡೆದರು. ಲಿಂಗ ದೇಹವನ್ನು ಶ್ರೀಮಠಕ್ಕೆ ರಾತ್ರಿಯೇ ತೆಗೆದುಕೊಂಡು ಹೋಗಲಾಯಿತು. ಶ್ರೀ ಸುತ್ತೂರು ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು, ವಿವಿಧ ಮಠಗಳ ಹರಗುರು ಚರಮೂರ್ತಿಗಳು ಸೇರಿದಂತೆ ಸಾವಿರಾರು ಜನ ಭಕ್ತರು, ಅಭಿಮಾನಿಗಳು, ಗಣ್ಯರು ಶ್ರೀಮಠಕ್ಕೆ ಬಂದು ಅಂತಿಮ ದರ್ಶನ ಪಡೆದರು. ಮುಖ್ಯಮಂತ್ರಿ ಶ್ರೀ ಡಿ.ಕೆ.ಶಿವಕುಮಾರ್, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷರೂ, ಸಚಿವರೂ ಆದ ಶ್ರೀ ಈಶ್ವರ ಖಂಡ್ರೆಯವರು, ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ, ಶ್ರೀ ವಿ.ಸೋಮಣ್ಣ, ಸಂಸದ ಡಾ.ಸಿ.ಎನ್.ಮಂಜುನಾಥ್, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ಸೇರಿದಂತೆ ಜನ ಪ್ರತಿನಿಧಿಗಳು ಅಂತಿಮ ದರ್ಶನ ಪಡೆದರು.

**ಸರ್ಕಾರಿಗೌರವ:** ಪೊಲೀಸರು ೨೧ ಕುಶಾಲ ತೋಪು ಹಾರಿಸುವದರ ಮೂಲಕ ಅಂತಿಮ ಸರ್ಕಾರಿ ಗೌರವ ಸಲ್ಲಿಸಿದರು. ಲಿಂಗದೇಹದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರಿಗೆ ಹಸ್ತಾಂತರ ಮಾಡುವಾಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾವುಕರಾದರು.

**ಅಂತಿಮಯಾತ್ರೆ:** ಪರಮಪೂಜ್ಯ ಶ್ರೀ ಶ್ರೀಗಳವರ ಲಿಂಗದೇಹವನ್ನು ಬೆಳ್ಳಿ ಪಾಲಕಿಯಲ್ಲಿ ಕೂರಿಸಿ ಅಂತಿಮ ಯಾತ್ರೆ ಕನಕಪುರದ ಚನ್ನಬಸಪ್ಪ ವೃತ್ತ, ಅಯ್ಯಪ್ಪಸ್ವಾಮಿ ದೇಗುಲದ ಮೂಲಕ ನಡೆಸಲಾಯಿತು. ಮೆರವಣಿಗೆಯಲ್ಲಿ ವೀರಗಾಸೆ, ನಂದೀಧ್ವಜ ಮೊದಲಾದ ಜನಪದ ಕಲಾ ತಂಡಗಳು ಭಾಗವಹಿಸಿದ್ದವು. ರಸ್ತೆ ಹಾಗೂ ರಸ್ತೆ ಇಕ್ಕೆಡೆಗಳಲ್ಲಿ ಸಾವಿರಾರು ಜನ ಭಾವುಕರಾಗಿ ಭಾಗವಹಿಸಿ ಅಶ್ರುತರ್ಪಣ ಸಲ್ಲಿಸಿದರು.

**ಕ್ರಿಯಾಸಮಾಧಿ:** ಶ್ರೀಮಠದ ಆವರಣದಲ್ಲಿರುವ ಪೂಜ್ಯ ಶ್ರೀ ಶ್ರೀ ಇಮ್ಮಡಿ ನಿರ್ವಾಣ ಸ್ವಾಮಿಗಳು ಹಾಗೂ ಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳವರ ಗದ್ದುಗೆ ಪಕ್ಕದಲ್ಲಿಯೇ ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಕ್ರಿಯಾಸಮಾಧಿ ನಡೆಯಿತು. ಲಿಂಗದೇಹವನ್ನು ಕೂರಿಸಿ, ಇಷ್ಟಲಿಂಗವನ್ನಿರಿಸಿ, ಪಂಚಾಮೃತ ಅಭಿಷೇಕ, ಮತ್ತು ವಿಶೇಷ ಪೂಜೆಯನ್ನು ಶ್ರೀ ಸುತ್ತೂರು ಜಗದ್ಗುರು, ಶ್ರೀ ಸಿದ್ಧಗಂಗಾ ಶ್ರೀಗಳ ದಿವ್ಯಸಾನ್ನಿಧ್ಯದಲ್ಲಿ ಹರಗುರು ಚರಮೂರ್ತಿಗಳ ಉಪಸ್ಥಿತಿಯಲ್ಲಿ ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಕರಕಮಲ ಸಂಜಾತರಾದ ಪೂಜ್ಯ ಡಾ. ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರು ನೆರವೇರಿಸಿದರು.

**ದಾಸೋಹ ವ್ಯವಸ್ಥೆ:** ಅಂತ್ಯ ನಮನ ಸಲ್ಲಿಸಲು ಬಂದ ಭಕ್ತರು, ಅಭಿಮಾನಿಗಳಿಗೆ ಹಿಂದಿನ ದಿನದಿಂದಲೇ ಸಮರ್ಪಕವಾದ ದಾಸೋಹ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಸೂಕ್ತವಾದ ರಕ್ಷಣಾ ವ್ಯವಸ್ಥೆ ಮಾಡಲಾಗಿತ್ತು.

**ಶ್ರೀವಾಣಿ**

ಲೋಕದಲ್ಲಿ ಎರಡು ವರ್ಗದ ಜನರಿದ್ದಾರೆ. ೧. ಕಣ್ಣಿವೆ, ನೋಡಲಾರರು, ಕಿವಿ ಇದೆ ಕೇಳಲಾರರು ೨. ಕಣ್ಣಿದ್ದು ಕುರುಡರಾಗಿರುವವರೇ ಹೆಚ್ಚು. ಕಿವಿಯಿದ್ದು ಕೇಳದವರೇ ಬಹಳ.





## ಹೈಕೋರ್ಟ್ ತೀರ್ಪು

# 14 ಎಕರೆ ಜಮೀನು ಸಿದ್ದಗಂಗಾ ಮಠಕ್ಕೆ: ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನ ಸಿದ್ಧಗಂಗಾ ಮಠದ 'ದಾಸೋಹ ಪ್ರಸಾದ ವಿತರಣಾ ಕೇಂದ್ರ'ಕ್ಕೆ ಬೆಂಗಳೂರು ವ್ಯಾಪ್ತಿಯ ಕದರನಹಳ್ಳಿಯಲ್ಲಿ 14 ಎಕರೆ ಜಮೀನು ಮಂಜೂರು ಮಾಡಿದ್ದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಮಂಜೂರಾತಿ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಮಠದ ಆಡಳಿತಾಧಿಕಾರಿ ಎಸ್.ವಿಶ್ವನಾಥಯ್ಯ ಮತ್ತು ರಾಜ್ಯ ಕಂದಾಯ ಇಲಾಖೆ ಸಲ್ಲಿಸಿದ್ದ ರಿಟ್ ಮೇಲ್ಮನವಿಗಳನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ಈ ಕುರಿತಂತೆ, ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ಸಮರ್ಥಿಸಿದೆ.

'ಈ ಪ್ರಕರಣದಲ್ಲಿ ಸರ್ಕಾರದ ಅಮೂಲ್ಯ ಆಸ್ತಿಯನ್ನು ನುಂಗಲು ಕೆಲವು ಕಾಣದ ಕೈಗಳು ತೆರೆಮರೆಯಲ್ಲಿ ಕೆಲಸ ಮಾಡಿರುವುದು ಕಂಡು ಬರುತ್ತಿದೆ. ಅರ್ಜಿಯಲ್ಲಿನ ಪ್ರತಿವಾದಿಗಳು ಸಾಗುವಳಿ ಚೀಟಿಯ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವುದು ಮತ್ತು ನಕಲಿ ಹಂಚಿಕೆ ದಾಖಲೆ ಹೊಂದಿರುವುದು ವೇದ್ಯವಾಗಿದೆ. ನ್ಯಾಯಾಲಯವನ್ನು ವಂಚಿಸುವ ಇಂತಹವರನ್ನು ಸುಲಭಕ್ಕೆ ಕ್ಷಮಿಸಲು ಆಗುವುದಿಲ್ಲ. ಆದಾಗ್ಯೂ, ಪ್ರತಿವಾದಿಗಳು ಬಡವರಾಗಿರುವ ಕಾರಣ ಯಾವುದೇ ದಂಡ ಅಥವಾ ಕಠಿಣ ಕ್ರಮಕ್ಕೆ ಮುಂದಾಗಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮಠದ ಪರವಾಗಿ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲ ಸಂಜೀವಿನಿ ಪಿ. ನಾವದಗಿ ವಕಾಲತ್ತು ವಹಿಸಿದ್ದರು.



**ಪ್ರಕರಣವೇನು?:** ತುಮಕೂರಿನ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಸಿದ್ಧಲಿಂಗ ಸ್ವಾಮೀಜಿ, 'ದಾಸೋಹ ಪ್ರಸಾದ ವಿತರಣಾ ಕೇಂದ್ರ' ನಿರ್ಮಿಸುವ ಉದ್ದೇಶಕ್ಕಾಗಿ ಸೂಕ್ತ ಜಮೀನು ಮಂಜೂರು ಮಾಡುವಂತೆ 2007ರ ಏಪ್ರಿಲ್ ಮತ್ತು 2008ರ ಜೂನ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಈ ಮನವಿ ಪರಿಗಣಿಸಿದ್ದ ರಾಜ್ಯ ಕಂದಾಯ ಇಲಾಖೆಯು [illegible]ರ ಮೇನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ ಕದರನಹಳ್ಳಿಯ ಸರ್ವೆ ನಂಬರ್ 41ರಲ್ಲಿನ 14.25 ಎಕರೆ ಗೋಮಾಳ ಜಮೀನನ್ನು ಮಠಕ್ಕೆ ಮಂಜೂರು ಮಾಡಿ ಆದೇಶಿಸಿತ್ತು.

ಇದನ್ನು ಆಕ್ಷೇಪಿಸಿದ್ದ ಪ್ರತಿವಾದಿಗಳಾದ ಕದರನಹಳ್ಳಿಯ ಕೆ.ಎಸ್.ಮಂಜೇಶ್ ಬಿನ್ ಲೇಟ್ ಸೀತಾರಾಮಯ್ಯ ಸೇರಿದಂತೆ ಒಟ್ಟು ಐವರು, 'ನಾವು ಆದಿ ಕರ್ನಾಟಕ ಪಂಗಡಕ್ಕೆ ಸೇರಿದವರು. ಮಠಕ್ಕೆ ಹಂಚಿಕೆ ಮಾಡಿರುವ ಜಮೀನಿಗೆ ಸಾಗುವಳಿ ಚೀಟಿ ಹೊಂದಿದ್ದೇವೆ. ಹಾಗಾಗಿ, ಸರ್ಕಾರ ಮಠಕ್ಕೆ ಜಮೀನು ಮಂಜೂರು ಮಾಡಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ತಕರಾರು ಎತ್ತಿದ್ದರು.

ಈ ಪ್ರಕರಣ, ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಇತ್ಯರ್ಥಗೊಂಡಿತ್ತು ಮತ್ತು ನ್ಯಾಯಮಂಡಳಿ ಮಠದ ಪರವಾಗಿ ಆದೇಶ ಮಾಡಿತ್ತು. ಇದನ್ನು ಪ್ರಶ್ನಿಸಿ ಮಂಜೇಶ್ ಮತ್ತಿತರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಕುರಿತಾದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ 2025ರ ಜುಲೈನಲ್ಲಿ ನ್ಯಾಯಮಂಡಳಿ ಆದೇಶವನ್ನು ರದ್ದುಗೊಳಿಸಿ ಆದೇಶಿಸಿತ್ತು. 'ವಿವಾದಿತ ಜಮೀನಿನಲ್ಲಿ ಮಂಜೇಶ್ ಸೇರಿದಂತೆ ಐವರು ಅರ್ಜಿದಾರರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ತಕ್ಷಣವೇ ನಮೂದಿಸಬೇಕು' ಎಂದು ಸ್ಥಳೀಯ ತಹಶೀಲ್ದಾರ್ ಅವರಿಗೆ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿದ್ದ ಮಠ ಮತ್ತು ಸರ್ಕಾರ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದವು.

(ಕೃಪೆ: ಪ್ರಜಾವಾಣಿ, ೧೩-೬-೨೦೨೬)

**ಅಭಿನಂದನೆ**

# 'ನಾಡೋಜ' ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾದ ಹಿರಿಯ ವಿದ್ವಾಂಸ, ಸಂಶೋಧಕ ಪ್ರೊ.ಸಿ.ಮಹಾದೇವಪ್ಪ

**– ಪ್ರಕಾಶ ಗಿರಿಮಲ್ಲನವರ, ಬೆಳಗಾವಿ**



ಕನ್ನಡ ಸಾಹಿತ್ಯ ಸಂಶೋಧನಾ ಪರಂಪರೆಯಲ್ಲಿ ಕೆಲವು ವ್ಯಕ್ತಿತ್ವಗಳು ಕಾಲಾತೀತವಾಗಿರುತ್ತವೆ. ಅವರ ಸಾಧನೆ ಕೇವಲ ಕೃತಿಗಳ ಸಂಖ್ಯೆಯಲ್ಲಿ ಅಲ್ಲ, ಸಾಹಿತ್ಯದ ಆತ್ಮವನ್ನು ಅರಿತು ಅದನ್ನು ಪೀಳಿಗೆಗಳಿಗೆ ಹಂಚುವ ನಿಷ್ಠೆಯಲ್ಲಿ ಅಡಕವಾಗಿರುತ್ತದೆ. ಅಂತಹ ಮಹನೀಯರಲ್ಲಿ ಸಂಶೋಧನಾ ತಪಸ್ವಿ ಪ್ರೊ. ಸಿ. ಮಹಾದೇವಪ್ಪನವರು ಅಗ್ರಗಣ್ಯರು. ಕಳೆದ ಎಂಟು ದಶಕಗಳಿಂದ ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ಅವರು ಸಲ್ಲಿಸಿರುವ ಸೇವೆ ಅಪಾರ ಮತ್ತು ಅಪೂರ್ವ. ವಯಸ್ಸು ನೂರ ನಾಲ್ಕನ್ನು ದಾಟಿದ್ದರೂ ಅವರಲ್ಲಿರುವ ಉತ್ಸಾಹ, ಚೈತನ್ಯ ಮತ್ತು ಅಧ್ಯಯನದ ತವಕ ಇಂದಿನ ಯುವ ಸಂಶೋಧಕರಿಗೂ ಮಾದರಿಯಾಗಿದೆ.

ಪ್ರೊ. ಮಹಾದೇವಪ್ಪನವರ ಜೀವನವೇ ಒಂದು ನಿರಂತರ ಸಾಧನೆಯ ಕಥೆ. ಸಾಹಿತ್ಯದ ಮೇಲೆ ಅವರಿಗಿದ್ದ ಪ್ರೀತಿ ಕೇವಲ ಆಸಕ್ತಿ ಮಟ್ಟದಲ್ಲೇ ನಿಂತಿರಲಿಲ್ಲ; ಅದು ತಪಸ್ಸಿನ ರೂಪ ಪಡೆದಿತ್ತು. ಗ್ರಂಥಾಲಯಗಳಲ್ಲಿನ ಅನೇಕ ಅಮೂಲ್ಯ ಪಾಂಡಿತ್ಯಗ್ರಂಥಗಳನ್ನು ಶೋಧಿಸಿ, ಅಪರೂಪದ ಕೃತಿಗಳನ್ನು ಸಂಗ್ರಹಿಸಿ, ಅವುಗಳನ್ನು ಸಮಗ್ರವಾಗಿ ಸಂಪಾದಿಸಿ ಪ್ರಕಟಿಸುವ ಮೂಲಕ ಅವರು ಕನ್ನಡ ಸಾಹಿತ್ಯಲೋಕಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಸಂಶೋಧನೆ ಎಂದರೆ ಕೇವಲ ಮಾಹಿತಿಗಳ ಸಂಗ್ರಹವಲ್ಲ; ಅದರ ಹಿಂದೆ ಇರುವ ತತ್ತ್ವಚಿಂತನೆ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಅರಿಯುವುದು ಮುಖ್ಯ ಎಂಬುದನ್ನು ಅವರು ತಮ್ಮ ಕಾರ್ಯದಿಂದ ತೋರಿಸಿದ್ದಾರೆ.

೧೦೪ ವರ್ಷಗಳ ಸುದೀರ್ಘ ಜೀವನ ಸಾಗಿಸುತ್ತಿರುವ ಇವರ ಬತ್ತದ ಉತ್ಸಾಹ ನಿಜಕ್ಕೂ ಆಶ್ಚರ್ಯಕರ. ವಯಸ್ಸು ದೇಹಕ್ಕೆ ಬಂದರೂ ಮನಸ್ಸಿಗೆ ಬರಬಾರದು ಎಂಬುದಕ್ಕೆ ಅವರು ಜೀವಂತ ಸಾಕ್ಷಿ. ಸಾಹಿತ್ಯ ಕ್ಷೇತ್ರದ ಭೀಷ್ಮರೆಂದು ಕರೆಯಲ್ಪಡುವ ಇಂತಹ ಮಹನೀಯರಿಗೆ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಗೌರವ ದೊರೆತಿರುವುದು ಅತ್ಯಂತ ಸಂತೋಷದ ಸಂಗತಿ. ಈ ಗೌರವ ಅವರಿಗೆ ಎಂದೋ ದೊರಕಬೇಕಾಗಿದ್ದರೂ, ಗುಣಗ್ರಾಹಿ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಅವರ ಅವಧಿಯಲ್ಲಿ ಅದು ಸಾಧ್ಯವಾದುದು ಅಭಿನಂದನೀಯ. ಇದು ಕೇವಲ ವ್ಯಕ್ತಿಗೌರವವಲ್ಲ; ಕನ್ನಡ ಸಂಶೋಧನಾ ಪರಂಪರೆಯನ್ನೇ ಗೌರವಿಸುವ ಒಂದು ಸತ್ಸಂಪ್ರದಾಯ.

**ಜನನ:** ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ದೀರ್ಘಕಾಲದ ತಪಸ್ಸಿನ ಮೂಲಕ ಅಪೂರ್ವ ಸ್ಥಾನವನ್ನು ಪಡೆದ ಮಹನೀಯರಲ್ಲಿ ಪ್ರೊ. ಸಿ. ಮಹಾದೇವಪ್ಪನವರು ಅಗ್ರಗಣ್ಯರು. ಮೈಸೂರು ಜಿಲ್ಲೆಯ ಸೋಸಲೆ ಗ್ರಾಮದಲ್ಲಿ ಸೋಸಲೆ ಬಸಪ್ಪ ಮತ್ತು ವೀರಾಜಮ್ಮ ದಂಪತಿಗಳ ಮಗನಾಗಿ ೮ ಜುಲೈ ೧೯೨೨ ರಂದು, ಜನಿಸಿದ ಅವರು, ಬಾಲ್ಯದಿಂದಲೇ ಅಕ್ಷರ ಸಂಸ್ಕೃತಿಯ ವಾತಾವರಣದಲ್ಲಿ ಬೆಳೆದರು. ಅವರ ತಂದೆ ಬಸಪ್ಪನವರು ಪ್ರಾಥಮಿಕ ಶಾಲೆಯ ಉಪಾಧ್ಯಾಯ ರಾಗಿದ್ದುದರಿಂದ, ಎಳೆಯ ವಯಸ್ಸಿನಲ್ಲಿಯೇ ವಿದ್ಯೆಯ ಮೆಲುಕು ಮತ್ತು ಪುಸ್ತಕ ಪ್ರೀತಿ ಅವರ ಮನಸ್ಸಿನಲ್ಲಿ ಬೆಳೆಯಿತು.

**ಶಿಕ್ಷಣ:** ಪ್ರಾಥಮಿಕ ಶಿಕ್ಷಣವನ್ನು ಸೋಸಲೆಯಲ್ಲಿ ಪೂರ್ಣಗೊಳಿಸಿದ ಅವರು, ಮೈಸೂರಿನ ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಮುಗಿಸಿದರು. ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ.ಆನರ್ಸ್ ಪದವಿ ಪಡೆದರು. ಅವರ ವಿದ್ಯಾಭ್ಯಾಸದ ಹಾದಿಯಲ್ಲಿ ಆ ಕಾಲದ ಮಹನೀಯರಾದ ಎ.ಆರ್. ಕೃಷ್ಣಶಾಸ್ತ್ರಿ, ಡಿ.ಎಲ್. ನರಸಿಂಹಾಚಾರ್,

ಕೆ.ವೆಂಕಟರಾಮಪ್ಪ, ಹಾಗೂ ಕೆ.ವಿ.ಪುಟ್ಟಪ್ಪ (ಕುವೆಂಪು) ಮೊದಲಾದ ವಿದ್ವಾಂಸರು ಗುರುಗಳಾಗಿ ದಾರಿ ದೀಪರಾದರು. ಈ ಪಾಂಡಿತ್ಯಮಯ ವಾತಾವರಣವು ಮಹಾದೇವಪ್ಪನವರ ಸಂಶೋಧನಾ ಮನೋಭಾವಕ್ಕೆ ದೃಢವಾದ ಅಸ್ತಿತ್ವ ನೀಡಿತು.

**ಸಂಶೋಧನೆ:** ಕೆಲವು ಕಾಲ ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಓಲೆಗರಿ ಪ್ರತಿಮಾಡುವ ಕಾರ್ಯನಿರ್ವಹಿಸಿದ ಅವರು, ಹಸ್ತಪ್ರತಿಗಳೊಂದಿಗೆ ಆಪ್ತ ಸಂಬಂಧ ಬೆಳೆಸಿಕೊಂಡರು. ಆ ಅನುಭವವೇ ಅವರ ಮುಂದಿನ ಸಂಪಾದನಾ ಕಾರ್ಯಗಳಿಗೆ ಪೂರಕವಾಯಿತು. ತುಮಕೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ, ಚಿಕ್ಕಮಗಳೂರಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾಗಿ ಹಾಗೂ ಬೆಂಗಳೂರಿನ ಮಹಾರಾಣಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾದರು. ಬಳಿಕ ಎಂ.ಎ. ಶಿಕ್ಷಣವನ್ನು ಪೂರ್ಣಗೊಳಿಸಿ ತಮ್ಮ ವಿದ್ಯಾಸಾಧನೆಯನ್ನು ಮತ್ತಷ್ಟು ಗಾಢಗೊಳಿಸಿದರು.

ಶೈಕ್ಷಣಿಕ ಕ್ಷೇತ್ರದ ಹೊರತಾಗಿಯೂ ಅವರು ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸಕರಾಗಿ, 'ಪ್ರಬುದ್ಧ ಕರ್ನಾಟಕ' ಸಂಪಾದಕ ಸಮಿತಿ ಅಧ್ಯಕ್ಷರಾಗಿ, ವಿವಿಧ ಪರೀಕ್ಷಾ ಮಂಡಳಿಗಳ ಅಧ್ಯಕ್ಷರಾಗಿ ಹಾಗೂ ಭಾಷಾಂತರ ಯೋಜನೆಯ ಸಮಿತಿ ಸದಸ್ಯರಾಗಿ ಅಪೂರ್ವ ಸೇವೆ ಸಲ್ಲಿಸಿದರು. ಅವರ ಸೇವಾ ವ್ಯಾಪ್ತಿ ಶಿಕ್ಷಣ, ಸಂಪಾದನೆ, ಸಂಶೋಧನೆ ಮತ್ತು ಸಂಘಟನಾ ಕ್ಷೇತ್ರಗಳವರೆಗೂ ವಿಸ್ತರಿಸಿತ್ತು.

**ಸಂಪಾದನಾ ಕ್ಷೇತ್ರ:** ಸಂಪಾದನಾ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆ ವಿಶೇಷ ಗಮನಾರ್ಹ. ಗುಬ್ಬಿ ಮಲ್ಲಣಾರ್ಯನ ಭಾವಚಿಂತಾರತ್ನ, ಹರಿಹರ ಕವಿಯ ಮನುಚೋಳ ರಗಳೆ, ಚೆನ್ನಂಜೆದೇವರ ಶಂಕರದೇವರ ಕಂದ, ಚಂದ್ರಕವಿಯ ಶಂಕರ ಶತಕ ಮುಂತಾದ ಕೃತಿಗಳ ಸಂಪಾದನೆಯ ಮೂಲಕ ಶತಕ ಸಾಹಿತ್ಯಕ್ಕೆ ಹೊಸ ಚೈತನ್ಯ ನೀಡಿದರು. ಸಂಶೋಧನಾತ್ಮಕ ಅಜ್ಞಾತ ಶತಕಗಳನ್ನು ಉಧೃತ ವೃತ್ತಗಳೊಂದಿಗೆ ಪರಿಚಯಿಸಿ, ಕನ್ನಡ ಸಾಹಿತ್ಯಲೋಕಕ್ಕೆ ಹೊಸ ದಾರಿಯನ್ನು ತೋರಿಸಿದರು.

ಇದಷ್ಟೇ ಅಲ್ಲದೆ ಮುಕ್ತಿಸೋಪಾನ ಗೋರಕ್ಷ ಶತಕ, ಉದಯಾದಿತ್ಯಾಲಂಕಾರ, ಕಾವ್ಯ ಸಮರ್ಥನೆ (ಕವಿ ಶೆಲ್ಲಿಯ ಕೃತಿಯ ಅನುವಾದ), ಪ್ರಭುಗೀತಾ, ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು, ಅರವತ್ತುಮೂರು ಚರಿತ್ರೆ (ಆರಾಧ್ಯದೇವ ಕೃತಿ), ತೋಂಟದ ಸಿದ್ಧೇಶ್ವರ ಪುರಾಣ, ಉದಯಾದಿತ್ಯನ ಜ್ಞಾನಸಾರ, ಕಲ್ಯಾಣ ಶತಕ, ಕಟ್ಟಿಗೆಹಳ್ಳಿ ಸಿದ್ಧಲಿಂಗನ ಏಕೋತ್ತರ ಶತಸ್ಥಲ, ಮುಂತಾದ ಅನೇಕ ಅಮೂಲ್ಯ ಕೃತಿಗಳನ್ನು ಸಂಪಾದಿಸಿ ಕನ್ನಡ ಸಾರಸ್ವತ ಪ್ರಪಂಚಕ್ಕೆ ನೀಡಿದರು. ಈ ಕೃತಿಗಳ ಮೂಲಕ ಅವರು ಕೇವಲ ಪಾಠಸಂಪಾದಕರಾಗಿ ಮಾತ್ರವಲ್ಲ, ಸಂಶೋಧನಾತ್ಮಕ ಚಿಂತಕರಾಗಿ ತಮ್ಮದೇ ಆದ ಗುರುತನ್ನು ನಿರ್ಮಿಸಿಕೊಂಡರು.

ಪ್ರಭುಗೀತಾ ಕೃತಿ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದ ಮಹತ್ವದ ಗ್ರಂಥ. ಅನೇಕ ವರ್ಷಗಳ ಕಾಲ ಅಪ್ರಕಟಿತವಾಗಿಯೇ ಉಳಿದಿದ್ದ ಈ ಕೃತಿಯನ್ನು ಒಂದೇ ಒಂದು ಹಸ್ತಪ್ರತಿಯನ್ನು ಆಧರಿಸಿ ಸಂಶೋಧನಾ ತಪಸ್ವಿ ಪ್ರೊ. ಸಿ.ಮಹಾದೇವಪ್ಪ ಅವರು ಕನ್ನಡ ಮತ್ತು ಸಂಸ್ಕೃತ ಉಭಯ ಭಾಷೆಗಳಲ್ಲಿ ಪ್ರಕಟಿಸಿದುದು ಅವರ ಪಾಂಡಿತ್ಯ, ಸಹನೆ ಮತ್ತು ತಪಸ್ಸಿನ ಸಾರ್ಥಕತೆಯ ಸಂಕೇತವಾಗಿದೆ. ಹಸ್ತಪ್ರತಿಗಳ ಅಧ್ಯಯನ, ಪಾಠಾಂತರಗಳ ಪರಿಶೀಲನೆ, ಅರ್ಥನಿರ್ಣಯ ಹಾಗೂ ವ್ಯಾಖ್ಯಾನ. ಆ ಮಹಾಕಾರ್ಯವನ್ನು ಅವರು ಅತ್ಯಂತ ಶ್ರದ್ಧೆಯಿಂದ ನೆರವೇರಿಸಿದರು.

ಈ ಕೃತಿಯ ಲೋಕಾರ್ಪಣೆ ಅಂದಿನ ಭಾರತದ ಉಪರಾಷ್ಟ್ರಪತಿಗಳಾಗಿದ್ದ ಭೈರೋನ್ ಸಿಂಗ್ ಶೇಖಾವತ್ ಅವರಿಂದ ನಡೆದಿರುವುದು ವಿಶೇಷ ಗೌರವದ ವಿಷಯ. ಇದು ಕೇವಲ ಒಂದು ಗ್ರಂಥದ ಬಿಡುಗಡೆ ಮಾತ್ರವಲ್ಲ; ಶರಣ ಸಂಸ್ಕೃತಿ ಮತ್ತು ವಚನ ಪರಂಪರೆಯ ಮಹತ್ವವನ್ನು ರಾಷ್ಟ್ರ ಮಟ್ಟದಲ್ಲಿ ಪ್ರತಿಷ್ಠಾಪಿಸಿದ ಘಟನೆಯೂ ಆಗಿದೆ.

ಶರಣ ಸಂಸ್ಕೃತಿ ಅಧ್ಯಯನಕ್ಕೆ ಪ್ರಭುಗೀತಾ ಐತಿಹಾಸಿಕ ಮಹತ್ವದ್ದಾಗಿದೆ. ವಚನ ಸಾಹಿತ್ಯದ ಜ್ಞಾನಾನುಭವವನ್ನು ಸಂಸ್ಕೃತ ಪಾಂಡಿತ್ಯದ ಮೂಲಕವೂ ಗ್ರಹಿಸಲು ಸಾಧ್ಯವಿದೆ ಎಂಬುದನ್ನು ಈ ಕೃತಿ ಸ್ಪಷ್ಟಪಡಿಸುತ್ತದೆ. ವಚನಗಳು ಅನುಭಾವಿಕ, ಜೀವಂತ ಮತ್ತು ನೇರ ಜೀವನದ ಅನುಭವಗಳ ಅಭಿವ್ಯಕ್ತಿ. ಆದರೆ

ಅವುಗಳ ತತ್ತ್ವಸಾರವನ್ನು ಕೇವಲ ಸಂಸ್ಕೃತಪರ ಪಂಡಿತರು ಅರ್ಥಮಾಡಿಕೊಳ್ಳುವುದು ಸುಲಭವಿರಲಿಲ್ಲ. ಈ ಹಿನ್ನೆಲೆಯನ್ನು ಪ್ರೊ. ಮಹಾದೇವಪ್ಪನವರು ತಮ್ಮ ಪ್ರಸ್ತಾವನೆಯಲ್ಲಿ ವಿವರಿಸುತ್ತಾರೆ.

ಅವರು ಗುಬ್ಬಿಯ ಮಲ್ಲಣ್ಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿನ ಒಂದು ಷಟ್ಪದಿಯನ್ನು ಉಲ್ಲೇಖಿಸುತ್ತಾರೆ:

**ವಿದ್ಯಾನಗರಿಯಲ್ಲಿಯಲ್ಲಮಪ್ರಭುದೇವ**
**ಹೃದ್ಯವಚನವನೊಗಟೆಯೆನಲಾಗ ನೃಪಸಭಾ**
**ವೇದ್ಯಮಪ್ಪಂತೆ ವೇದಾಗಮಾರ್ಥನಿಘಂಟುಸನ್ಮತ**
**ಪ್ರಭುಗೀತೆಯಾ**
**ಆದ್ಯಾಂತವಾಗಿ ರಚಿಸುತ ಶಿಲಾಶಾಸನದೊ**
**ಳುದ್ಯನ್ಮಹಾತತ್ವನಿರ್ಣಯವ ಲೇಖಿಸುತ**
**ತದ್ಯಶೋಮೂರ್ತಿ ಹೆಸರಾದನಾ ಮಾಯಿದೇವ**
**ಪ್ರಭೂತ್ತಮನೇಳ್ಗೆಯಿಂ**
(ವೀರಶೈವಾಮೃತ ಪುರಾಣ ಕಾಂ.೭, ಸಂಧಿ ೧೭)

ಈ ಪದ್ಯದ ಆಶಯವನ್ನು ವಿವರಿಸುವ ಸಂದರ್ಭದಲ್ಲಿ ಮಹಾದೇವಪ್ಪನವರು ಹೇಳುವಂತೆ, ಆನುಭಾವಿಕ ವಚನ ಸಾಹಿತ್ಯದ ಜ್ಞಾನಾನುಭವವು ಕೇವಲ ಸಂಸ್ಕೃತಪರ ಅನ್ಯಧರ್ಮೀಯ ಪಂಡಿತರಿಗೆ ತತ್ತ್ವ ದೃಷ್ಟಿಯ ರುಚಿಭೇದದಿಂದ ಸಂಪೂರ್ಣವಾಗಿ ಲಭ್ಯವಾಗಲಿಲ್ಲ. ಹೀಗಾಗಿ ಪ್ರಭುದೇವರ ವಚನಗಳು ರಾಜಸಭೆಯ ಪಂಡಿತರಿಗೆ 'ಒಗಟು'ಯಂತಾಗಿದ್ದವು. ಆ ಬೌದ್ಧಿಕ ಕೊರತೆಯನ್ನು ನಿವಾರಿಸಲು ಮಗ್ಗೆಯ ಮಾಯಿದೇವರು ಪ್ರಭುದೇವರ ವಚನಗಳನ್ನು ಸಂಸ್ಕೃತಪರರಿಗೆ ಸುಪರಿಚಿತವಾದ ಭಾಷಾಶೈಲಿಯಲ್ಲಿ, ವೇದಾಗಮಾರ್ಥಸಮ್ಮತವಾಗಿ ವ್ಯಾಖ್ಯಾನಿಸಿ ನೃಪಸಭೆಗೆ ವೇದ್ಯವಾಗುವಂತೆ ರೂಪಿಸಿದರು ಎಂದು ಅವರು ವಿಶ್ಲೇಷಿಸುತ್ತಾರೆ.

ಇದರಿಂದ ಎರಡು ಪ್ರಮುಖ ಅಂಶಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ, ವಚನ ಸಾಹಿತ್ಯದ ತತ್ತ್ವ ಗಂಭೀರತೆ. ಎರಡನೆಯದಾಗಿ, ಅದರ ಸಾರವನ್ನು ವಿಭಿನ್ನ ಭಾಷಾ–ಸಾಂಸ್ಕೃತಿಕ ವಲಯಗಳಿಗೆ ತಲುಪಿಸುವ ಅಗತ್ಯತೆ. ಪ್ರಭುಗೀತಾ ಈ ಎರಡು ಲೋಕಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಕನ್ನಡದ ಆನುಭಾವಿಕ ಪರಂಪರೆಯನ್ನು ಸಂಸ್ಕೃತ ತತ್ತ್ವ ಚಿಂತನೆಯೊಂದಿಗೆ ಸಂವಾದಗೊಳಿಸುವ ಅಪೂರ್ವ ಪ್ರಯತ್ನ ಇದಾಗಿದೆ.

ಇದೇ ಸಂದರ್ಭದಲ್ಲಿ ಪ್ರೊ. ಮಹಾದೇವಪ್ಪನವರು ಇಂಗ್ಲಿಷ್ ಭಾಷೆಯಲ್ಲಿಯೂ ಪ್ರಸ್ತಾವನೆ ಬರೆದು, ಶರಣ ತತ್ತ್ವವನ್ನು ಅಂತರರಾಷ್ಟ್ರೀಯ ವಾಚಕರಿಗೂ ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಇದು ಅವರ ದೂರದೃಷ್ಟಿ ಮತ್ತು ಸಮಗ್ರ ಚಿಂತನೆಯ ಪ್ರತಿಬಿಂಬ. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಈ ಮೂರು ಭಾಷಾ ಪ್ರಪಂಚಗಳ ನಡುವೆ ಸಂವಹನ ಸಾಧಿಸಿದ ಈ ಕೃತಿ, ನಿಜಾರ್ಥದಲ್ಲಿ ಬಹುಭಾಷಾ ಸಂಶೋಧನೆಯ ಮಾದರಿಯಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಅರಳಿಕೊಂಡ ಆಧ್ಯಾತ್ಮಿಕ ಕೆಂದಾವರೆಯ ಪರಿಮಳವು ನಡುಗಾಲ ನಾಡೆಲ್ಲ ಹರಡಿಕೊಂಡಿದೆ. ಆ ಕೆಂದಾವರೆಯ ಪರಿಮಳವೆಂದರೆ ಅಲ್ಲಮಪ್ರಭುದೇವ ಅವರ ಮಹಾಮಹಿಮ ವ್ಯಕ್ತಿತ್ವ. ಸಾವಿರಾರು ವರ್ಷಗಳಿಂದ ಈ ಭೂಮಿಯಲ್ಲಿ ಉಳಿದು, ಬೆಳೆದು, ಬೇರೂರಿಕೊಂಡಿದ್ದ ಆಧ್ಯಾತ್ಮದ ಒಲವು ಈ ಸಿದ್ಧಪುರುಷನಲ್ಲಿ ಬಾನೆತ್ತರ ಗರಿಕೆದರಿಕೊಂಡಿತು. ಅವರ ವಚನಗಳ ತತ್ತ್ವ ಗಂಭೀರತೆ, ಭಾಷೆಯ ಆಳ, ಅನುಭವದ ಶುದ್ಧತೆ – ಇವುಗಳ ವೈಭವಕ್ಕೆ ಬೆರಗಾಗದವರು ಕನ್ನಡನಾಡಿನಲ್ಲಿ ಯಾರಿದ್ದಾರೆ?

ಅಲ್ಲಮಪ್ರಭುದೇವರ ಕನ್ನಡ ವಚನಗಳನ್ನು ಸಂಸ್ಕೃತ ಭಾಷೆಗೆ ಪರಿವರ್ತಿಸಿ, ರಾಷ್ಟ್ರದ ಸಂಸ್ಕೃತಪರ ಪಾಂಡಿತ್ಯವಲಯಕ್ಕೆ ಅವರ ತತ್ತ್ವವನ್ನು ಪರಿಚಯಿಸಬೇಕೆಂಬ ಸಾಹಸ ಹದಿನೈದನೆಯ ಶತಮಾನದಲ್ಲೇ ನಡೆದಿದೆ. ಪ್ರಭುದೇವರು ಕಣ್ಮರೆಯಾಗಿ ಸುಮಾರು ಮೂರು ಶತಮಾನಗಳ ನಂತರ ಮಗ್ಗೆಯ ಮಾಯಿದೇವರು ಈ ಮಹತ್ತರ ಕಾರ್ಯವನ್ನು ಕೈಗೊಂಡರು. ಕನ್ನಡದ ಆನುಭಾವಿಕ ವಚನ ಪರಂಪರೆಯನ್ನು ಸಂಸ್ಕೃತದ ತತ್ತ್ವಭಾಷೆಗೆ ಅನುವಾದಿಸುವುದು ಸುಲಭ ಕಾರ್ಯವಲ್ಲ; ಅದು ಎರಡು ಸಂಸ್ಕೃತಿಗಳ ನಡುವಿನ ಸೇತುವೆ ನಿರ್ಮಿಸುವ ಮಹಾಯತ್ನ.

ಆದರೆ ಈ ಅಮೂಲ್ಯ ಕೃತಿ ದೀರ್ಘಕಾಲ ಇತಿಹಾಸದ ಮಣ್ಣಿನಡಿಯಲ್ಲಿ ಇಂಗಿದ ತೊರೆಯಂತೆ







ಅಡಗಿಯೇ ಉಳಿಯಿತು. ಅದರ ಅಸ್ತಿತ್ವವೇ ಬಹುಜನರಿಗೆ ತಿಳಿಯದಂತಾಯಿತು. ಇಂತಹ ಸಂದರ್ಭದಲ್ಲಿ ಆ ಕೃತಿಯನ್ನು ಅನ್ವೇಷಿಸಿ, ಪತ್ತೆಹಚ್ಚಿ, ಸಂಪಾದಿಸಿ, ಲೋಕಕ್ಕೆ ಪರಿಚಯಿಸಿದ ಮಹೋನ್ನತ ಕಾರ್ಯವನ್ನು ನೆರವೇರಿಸಿದವರು ಸಂಶೋಧನಾ ತಪಸ್ವಿ ಪ್ರೊ. ಸಿ.ಮಹಾದೇವಪ್ಪ. ಇದು ಕೇವಲ ಸಂಪಾದನಾ ಕಾರ್ಯವಲ್ಲ; ಇತಿಹಾಸದ ಒಳಹೊಕ್ಕ ಬೆಳಕನ್ನು ಹೊರಗೆ ತಂದು ನಿಲ್ಲಿಸಿದ ಮತ್ತೊಂದು ಸಾಹಸ.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ವಿದ್ಯಾವಾಚಸ್ಪತಿ ಎನಿಸಿಕೊಂಡಿದ್ದ ಸಾ.ಕೃ. ರಾಮಚಂದ್ರರಾವ್ ಅವರು "ಮಗ್ಗೆಯ ಮಾಯಿದೇವರ ಸಾಹಸವನ್ನು ಬೆಳಕಿಗೆ ತಂದ ಮಹಾದೇವಪ್ಪನವರ ಕಾರ್ಯವೇ ಇನ್ನೊಂದು ಸಾಹಸ" ಎಂದು ಹೇಳಿರುವ ನುಡಿಗಳು ಅಕ್ಷರಶಃ ಸತ್ಯ. ಈ ಮಾತುಗಳಲ್ಲಿ ಮಹಾದೇವಪ್ಪನವರ ಸಂಶೋಧನಾ ಗಂಭೀರತೆ ಮತ್ತು ಅವರ ಕಾರ್ಯದ ಐತಿಹಾಸಿಕ ಮಹತ್ವ ಸ್ಪಷ್ಟವಾಗುತ್ತದೆ.

ಕನ್ನಡ, ಸಂಸ್ಕೃತ ಮತ್ತು ಆಧ್ಯಾತ್ಮಿಕ ಪರಂಪರೆಯ ತ್ರಿವೇಣಿ ಸಂಗಮವಾಗಿ ಹೊರಹೊಮ್ಮಿದ ಈ ಸಂಶೋಧನಾ ಸಾಧನೆ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತದ್ದು. ಇಂತಹ ಮಹನೀಯ ಸಂಶೋಧಕರಿಗೆ ಈಗ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪದವಿ ದೊರೆತಿರುವುದು ಸಮಸ್ತ ಕನ್ನಡಿಗರಿಗೆ ಹೆಮ್ಮೆಯ ಸಂಗತಿ.

ನೂರಾ ನಾಲ್ಕು ವರ್ಷಗಳ ಹಿರಿಯ ವಿದ್ವಾಂಸರಾದ ಪ್ರೊ. ಸಿ.ಮಹಾದೇವಪ್ಪನವರು ಇನ್ನೂ ದೀರ್ಘಕಾಲ ನಮ್ಮ ಮಧ್ಯದಲ್ಲಿದ್ದು ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಸಂವರ್ಧಿಸಲಿ, ಸಂಶೋಧನಾ ದೀಪವನ್ನು ಬೆಳಗಿಸಲಿ ಎಂಬುದು ಹೃತ್ಪೂರ್ವಕ ಪ್ರಾರ್ಥನೆ.

**ಶ್ರೀವಾಣಿ**

ಆಕಾಂಕ್ಷೆಯಿಂದ ಆಡಂಬರಕ್ಕಾಗಿ ನೀಡುವ
ದನ ಧಾನ್ಯಗಳಿಗಿಂತ ಶಿವ ನೀಡಿದ
ಸಂಪತ್ತನ್ನು ಶಿವನ ಕಾರ್ಯಕ್ಕಾಗಿ ಶಿವನ
ಸಂಕಲ್ಪ ಸೇವೆಗಾಗಿ ಮಾಡುವ ಗುಪ್ತ
ದಾಸೋಹ ಮಹತ್ತರವಾದದು.

## 'ಸಿದ್ಧಗಂಗಾ' ಮಾಸಪತ್ರಿಕೆ ಆಜೀವ ಸದಸ್ಯರಲ್ಲಿ ಮನವಿ

ಶ್ರೀಮಠದ ಮುಖವಾಣಿ ಸಿದ್ಧಗಂಗಾ ಮಾಸಪತ್ರಿಕೆಗೆ ಆಜೀವ ಸದಸ್ಯರಾಗಿರುವುದು ಸಂತೋಷ. ಇದರಿಂದ **'ಸಿದ್ಧಗಂಗಾ'** ನಿರಂತರವಾಗಿ ನಿಮ್ಮ ಮನ-ಮನೆ ಬೆಳಗುತ್ತಲಿದೆ. ತಮಗೆ ಮಠದ ಪರವಾಗಿ ಧನ್ಯವಾದಗಳು.

ಕಾಗದ, ಮುದ್ರಣ, ಅಂಚೆ ವೆಚ್ಚ ಇನ್ನಿತರೆ ವೆಚ್ಚಗಳು ದುಬಾರಿಯಾಗಿದ್ದು, ಪತ್ರಿಕೆ ಮುನ್ನಡೆಸಲು ಕಷ್ಟವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಲೇ ಬರುತ್ತಿದ್ದೇವೆ.

ಪ್ರಾರಂಭಕ್ಕೆ ೫೦೦/- ರೂ, ೧೦೦೦/-ರೂ ಆಜೀವ ಸದಸ್ಯರಾಗಲು ಚಂದಾ ಸಂದಾಯ ಮಾಡಿದ್ದಿರಿ. ಇದರಿಂದ ಬ್ಯಾಂಕ್ ಠೇವಣಿಯಿಂದ ಬರುವ ಬಡ್ಡಿ ಕೇವಲ ೫೦/- ರೂ, ೧೦೦/- ಮಾತ್ರ. ಇಷ್ಟು ಕನಿಷ್ಠ ಹಣದಿಂದ ಪತ್ರಿಕೆ ಮುದ್ರಣ ತೊಡಕಾಗಿ ನಷ್ಟವಾಗುತ್ತಿದೆ. ಪ್ರಯುಕ್ತ ಈ ಆರ್ಥಿಕ ಕೊರತೆಯನ್ನು ದಯವಿಟ್ಟು ಅರ್ಥಮಾಡಿಕೊಳ್ಳುವಿರೆಂದು ಭಾವಿಸಿದ್ದೇವೆ.

**ಪ್ರಸ್ತುತ ದಶವಾರ್ಷಿಕ ಚಂದಾ, ೨೦೨೫ ವರ್ಷದಿಂದ ೨೫೦೦/- ರೂ ನಿಗದಿ ಮಾಡಿದೆ. ಈ ಮೊತ್ತಕ್ಕೆ ಹೊಂದುವಂತೆ ಹಿಂದೆ ೫೦೦/- ರೂ ಸಂದಾಯ ಮಾಡಿರುವವರು ಬಾಕಿ ೨೦೦೦/- ರೂ ಸಂದಾಯ ಮಾಡಬೇಕು. ೧೦೦೦/- ರೂ ಸಂದಾಯ ಮಾಡಿರುವವರು ಬಾಕಿ ೧೫೦೦/- ಸಂದಾಯ ಮಾಡಲು ಕೋರಿದೆ.**

ದಯಮಾಡಿ ತಮಗೆ ಅನ್ವಯಿಸುವ ಬಾಕಿ ಚಂದಾ ಮೊತ್ತವನ್ನು **ಸಿದ್ಧಗಂಗಾ ಮಾಸಪತ್ರಿಕೆ** ಹೆಸರಿನಲ್ಲಿ **ನಗದು/ಚೆಕ್/ಡಿ.ಡಿ.** ಮೂಲಕ ತಪ್ಪದೆ ಪತ್ರಿಕೆ ಆಜೀವ ಸದಸ್ಯತ್ವದ (LM) ಸಂಖ್ಯೆ ನಮೂದಿಸಿ ದೂರವಾಣಿ/ಮೊಬೈಲ್ ನಂಬರ್‌ನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡುವುದರ ಮೂಲಕ **'ಸಿದ್ಧಗಂಗಾ'** ಮುನ್ನಡೆಗೆ ಸಹಕರಿಸಬೇಕಾಗಿ ಕಳಕಳಿಯಿಂದ ಪ್ರಾರ್ಥಿಸುತ್ತೇವೆ. ವಿಳಾಸ ಬದಲಾವಣೆಯಾಗಿದ್ದರೆ ದಯವಿಟ್ಟು ಬದಲಾದ ವಿಳಾಸ ಹಾಗೂ ತಮ್ಮ ದೂರವಾಣಿ ಸಂಖ್ಯೆಯನ್ನು ತಮ್ಮ (LM) ಸಂಖ್ಯೆಯೊಂದಿಗೆ ಕಾರ್ಡಿನಲ್ಲಿ ಬರೆದು ಕಳುಹಿಸಿಕೊಟ್ಟರೆ ಪತ್ರಿಕೆ ತಮಗೆ ತಲುಪಲು ಅನುಕೂಲವಾಗುತ್ತದೆ.

**ಪ್ರಕಾಶಕರು,**
'ಸಿದ್ಧಗಂಗಾ' ಮಾಸಪತ್ರಿಕೆ,
ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ-೫೭೨ ೧೦೪.
**ದೂರವಾಣಿ : ೦೮೧೬-೨೨೮೨೩೨೨**

ಅಭಿನಂದನೆ

# ಪ್ರೊ॰ ಬಿ.ಗಂಗಾಧರಯ್ಯ ಅವರಿಗೆ ಅಭಿನಂದನೆ – ಸಾರ್ಥಕ ಸೇವೆಗೆ ಸಂದ ಗೌರವ




**ಜೂನ್** ೨೦ ರಂದು, ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಿವಿಲ್ ವಿಭಾಗದಲ್ಲಿ ಮುಖ್ಯಸ್ಥರಾಗಿ ಸುದೀರ್ಘಕಾಲ ಸಾರ್ಥಕ ಸೇವೆ ಸಲ್ಲಿಸಿದ್ಧ ಪ್ರೊ. ಬಿ.ಗಂಗಾಧರಯ್ಯ ಅವರಿಗೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರ ಸಂಘದ ವತಿಯಿಂದ ಏರ್ಪಡಿಸಿದ್ಧ ಸಮಾರಂಭದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿರುವ ಬಿರ್ಲಾ ಭವನದಲ್ಲಿ ನಡೆದ ಭವ್ಯ ಸಮಾರಂಭದ ದಿವ್ಯಸಾನ್ನಿಧ್ಯವನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಗಣ್ಯರ ಉಪಸ್ಥಿತಿಯಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿ **'ಗುರುಸೇವಾ ಭೂಷಣ'** ಪ್ರಶಸ್ತಿಯನ್ನು ನೀಡಿ ಪ್ರೊ. ಬಿ.ಗಂಗಾಧರಯ್ಯ ಮತ್ತು ಶ್ರೀಮತಿ ದಾಕ್ಷಿಣಿಯಮ್ಮ ದಂಪತಿಗಳನ್ನು ಸನ್ಮಾನಿಸಿ ಆಶೀರ್ವದಿಸಿದರು.

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ತಮ್ಮ ಶಿವನುಡಿಗಳಲ್ಲಿ "ವೃತ್ತಿಯಲ್ಲಿ ಬದ್ಧತೆ, ನಿಷ್ಠೆ, ಸೇವಾ ಮನೋಭಾವ ಹೊಂದಿರುವವರು ಆದರ್ಶ ವ್ಯಕ್ತಿಗಳಾಗುತ್ತಾರೆ ಎಂಬುದಕ್ಕೆ ಪ್ರೊ. ಬಿ.ಗಂಗಾಧರಯ್ಯ ಅವರು ನಿದರ್ಶನರಾಗಿದ್ದಾರೆ. ಶಿಕ್ಷಕ ವೃತ್ತಿ ಪವಿತ್ರವಾದದ್ದು, ಅದಕ್ಕೆ ಚ್ಯುತಿಬಾರದಂತೆ ಪ್ರೊ. ಬಿ.ಗಂಗಾಧರಯ್ಯ ಅವರು ಸೇವೆ ಸಲ್ಲಿಸಿ, ಸಾವಿರಾರು ವಿದ್ಯಾರ್ಥಿಗಳು ಭವಿಷ್ಯವನ್ನು ರೂಪಿಸಿಕೊಳ್ಳಲು ಪ್ರೇರಕಶಕ್ತಿಯಾಗಿದ್ದಾರೆ. ಅವರ ಸೇವೆ ಅನುಕರಣೀಯವಾದುದು. ಶ್ರೀಮಠದ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು 'ಸಮರ್ಪಣಾ'ಭಾವದಿಂದ ೮೬ನೇ ವಯಸ್ಸಿನಲ್ಲಿ ಉತ್ಸಾಹದಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರೊ. ಬಿ.ಗಂಗಾಧರಯ್ಯ ಅವರು ವಯಸ್ಸಿನಿಂದ ಮಾತ್ರವಲ್ಲ, ಅನುಭವ ಮತ್ತು ವ್ಯಕ್ತಿತ್ವದಿಂದಲೂ ಹಿರಿಯರಾಗಿದ್ದು, ಅವರ ಜೀವನ ಎಲ್ಲರಿಗೂ ಆದರ್ಶವಾಗಿದೆ. ಸ್ವಾಮಿ ವಿವೇಕಾನಂದರು ಒಬ್ಬ ಆದರ್ಶ ಸನ್ಯಾಸಿಯಾಗಿರುವುದಕ್ಕಿಂತ ಒಬ್ಬ ಆದರ್ಶ ಗೃಹಸ್ಥನಾಗುವುದು ಶ್ರೇಷ್ಠ ಎಂಬ ಮಾತಿನಂತೆ ಪ್ರೊ. ಬಿ.ಗಂಗಾಧರಯ್ಯ ಅವರು ತಮ್ಮ ಕುಟುಂಬ ಜೀವನವನ್ನು ರೂಪಿಸಿಕೊಂಡಿದ್ದಾರೆ. ಎಲ್ಲರಿಂದಲೂ ಗೌರವ ಮತ್ತು ಪ್ರೀತಿ ಗಳಿಸಿರುವ ಅವರ ವ್ಯಕ್ತಿತ್ವ ತುಂಬಾ ದೊಡ್ಡದು" ಎಂದು ಪ್ರಶಂಸಿಸಿದರು.

"ಧಾರ್ಮಿಕ ಸೇವೆಯಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿರುವ ಪ್ರೊ. ಬಿ.ಗಂಗಾಧರಯ್ಯನವರು ತಮ್ಮ ಊರು ಬಳ್ಳಗೆರೆಯ ಬಸವೇಶ್ವರ ಹಾಗೂ ಕಲ್ಲೇಶ್ವರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಓದುವ ಹವ್ಯಾಸವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಪ್ರೊ. ಬಿ.ಗಂಗಾಧರಯ್ಯನವರು ನಮ್ಮ ನಾಡು ಕಂಡ ಶ್ರೇಷ್ಠ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪನವರ ಬಹುತೇಕ ಎಲ್ಲಾ ಕಾದಂಬರಿಗಳನ್ನು ಓದಿರುವ ಅಪರೂಪದ ವ್ಯಕ್ತಿ. ಅವರೆಂದೂ ಹೊಗಳಿಕೆ, ಗೌರವವನ್ನು ಬಯಸದೆ, ಸೇವಾಭಾವನೆಯಿಂದ ಸಮಾಜಮುಖಿ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ ತಮ್ಮ ಗುರುವರ್ಯರಾದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳ ಆಪ್ತ ಶಿಷ್ಯರಲ್ಲಿ ಒಬ್ಬರಾಗಿದ್ದರು."

"ಸಹಕಾರ ಸಂಘಗಳ ಮೂಲಕ ತಾವು ಮಾತ್ರ ಬೆಳೆಯದೆ, ಎಲ್ಲರನ್ನೂ ಬೆಳೆಸುವ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವವರು ಪ್ರೊ. ಬಿ.ಗಂಗಾಧರಯ್ಯ ಅವರು ಶ್ರೀಮಠದಲ್ಲಿ ಪ್ರತಿವರ್ಷ ಜಾತ್ರೆ ಸಂದರ್ಭದಲ್ಲಿ ಆಯೋಜಿಸುತ್ತಿರುವ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಯಶಸ್ವಿಯಾಗಿ ನಡೆಯಲು ಅವರ ಪಾತ್ರ ತುಂಬಾ ದೊಡ್ಡದು" ಎಂದು ಹೇಳಿದರು.

ಅಭಿನಂದನ ನುಡಿಗಳನ್ನಾಡಿದ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ.ನಂಜುಂಡಪ್ಪ ಅವರು ಮಾತನಾಡಿ "ಸರಳತೆ, ಸಜ್ಜನಿಕೆ, ಕಾರ್ಯಬದ್ಧತೆ, ಶಿಸ್ತು, ಗಂಗಾಧರಯ್ಯ ಅವರ ವ್ಯಕ್ತಿತ್ವವನ್ನು ಮೇಲು ಮಟ್ಟಕ್ಕೆ ತಂದಿದೆ. ಇವರು ವಹಿಸಿಕೊಂಡ ಕೆಲಸವನ್ನು ಅರ್ಧಕ್ಕೆ ಬಿಡದೆ ಶ್ರದ್ಧೆಯಿಂದ ಪೂರ್ಣಗೊಳಿಸುತ್ತಾರೆ. ಎಲ್ಲರೊಂದಿಗೂ ವಿನಯ, ಆತ್ಮೀಯತೆಯಿಂದ ಬೆರೆಯುತ್ತಾರೆ. ಪ್ರೊ. ಬಿ.ಗಂಗಾಧರಯ್ಯ ಅವರು ಆದರ್ಶ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸೇವಾ ಮನೋಭಾವದ ಮೂಲಕ ಸಮಾಜಕ್ಕೆ ಮಾದರಿಯಾದ ವ್ಯಕ್ತಿ. ತಮ್ಮ ಜೀವನದ ಅವಧಿಯವರೆಗೆ ಶಿಕ್ಷಣ ಕ್ಷೇತ್ರದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ ಶ್ರೀಯುತರು ನಿವೃತ್ತಿಯ ನಂತರವೂ ಸಮಾಜದ ಅಭಿವೃದ್ಧಿ ಮತ್ತು ಜನ ಸೇವೆಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ" ಎಂದು ಪ್ರಶಂಸಿಸಿದರು.



ಮುಖ್ಯ ಅತಿಥಿಗಳಾಗಿದ್ದ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ ಡಾ.ಶಿವಕುಮಾರಯ್ಯ ಅವರು ಮಾತನಾಡಿ "ಇಂಜಿನಿಯರ್‌ಗಳೆಂದರೆ ಕೇವಲ ಕಟ್ಟಡ ಕಟ್ಟುವುದಲ್ಲ, ಯಂತ್ರಗಳನ್ನು ತಯಾರು ಮಾಡುವುದಲ್ಲ. ಪ್ರೊ. ಬಿ.ಗಂಗಾಧರಯ್ಯ ಅವರು ಆದರ್ಶ ವಿದ್ಯಾರ್ಥಿಗಳನ್ನು ತಯಾರು ಮಾಡಿ ಸಮಾಜಕ್ಕೆ ಕೊಡುಗೆಯಾಗಿ ನೀಡಿದರು. ಇವರು ವಿದ್ಯಾರ್ಥಿಗಳಿಗೆ ಕೇವಲ ಪಠ್ಯವನ್ನು ಬೋಧಿಸದೆ, ಆದರ್ಶ ಮೌಲ್ಯ, ನೀತಿ, ವ್ಯಕ್ತಿಪರತೆಯನ್ನು ಬಿತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ಸಮಾಜದಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿ ದೊಡ್ಡ ಸಾಧನೆ ಮಾಡುತ್ತಿದ್ದಾರೆ" ಎಂದು ಶ್ಲಾಘಿಸಿದರು.

ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎಸ್.ವಿ.ದಿನೇಶ್ ಅವರು ಮಾತನಾಡಿ "ನಾನು ಇದೇ ಸಂಸ್ಥೆಯಲ್ಲಿ ಪ್ರೊ. ಬಿ.ಗಂಗಾಧರಯ್ಯ ಅವರ ಶಿಷ್ಯನಾಗಿ, ಅವರ ಆದರ್ಶ ಗುಣಗಳು, ಮಾನವೀಯತೆಯನ್ನು ಹತ್ತಿರದಿಂದ ಕಂಡಿದ್ದೇನೆ. ಇವರ ಸೇವೆ, ಪರಿಶ್ರಮ, ಯುವ ಜನರಿಗೆ ಮಾದರಿಯಾಗಬೇಕು" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಡಾ.ಮಂಜುಳಾ ಅವರು ಮಾತನಾಡಿ "ಕುಟುಂಬದ ಸದಸ್ಯರೊಂದಿಗೆ ಸದಾ ಆತ್ಮೀಯವಾಗಿ ಬೆರೆಯುತ್ತಿದ್ದ ಅವರು ಎಲ್ಲರ ಮನಸ್ಸನ್ನು ಗೆಲ್ಲುತ್ತಿದ್ದರು. ಮಕ್ಕಳಲ್ಲಿ ಉತ್ತಮ ಮೌಲ್ಯಗಳು ಹಾಗೂ ಆದರ್ಶಗಳನ್ನು ಬಿತ್ತುವ ಉದ್ದೇಶದಿಂದ ಮಹಾನ್ ವ್ಯಕ್ತಿಗಳ ಜೀವನಚರಿತ್ರೆ ಮತ್ತು ವಿವಿಧ ಪುಸ್ತಕಗಳನ್ನು ಓದಿ ಹೇಳುತ್ತಿದ್ದರು ಅವರ ಮಾರ್ಗದರ್ಶನ ಹಾಗೂ ಪ್ರೋತ್ಸಾಹದಿಂದ ನಮ್ಮಲ್ಲಿ ಓದುವ ಹವ್ಯಾಸ ಬೆಳೆದಿದ್ದು. ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡಿತು" ಎಂದು ಸ್ಮರಿಸಿದರು.

ವೇದಿಕೆಯಲ್ಲಿ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಜಯವಿಭವಸ್ವಾಮಿ, ಶ್ರೀಮತಿ ದಾಕ್ಷಿಣಿಯಮ್ಮ, ಪ್ರೊ. ಬಿ.ಗಂಗಾಧರಯ್ಯ, ಶ್ರೀ ಸಿದ್ಧಗಂಗಾ ಮಠದ ಆಡಳಿತಾಧಿಕಾರಿ ಶ್ರೀ ಎಸ್.ವಿಶ್ವನಾಥಯ್ಯ, ನಿವೃತ್ತ ಅಭಿಯಂತರಾದ ಶ್ರೀ ಬಿ.ಮಹಾದೇವಯ್ಯ, ಡಾ.ಎಸ್.ವಿ.ದಿನೇಶ್, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರಾದ ಡಾ.ಬಿ.ಅಡವೀಶ್, ಪ್ರೊ. ಗಂಗಾಧರಯ್ಯನವರ ಕುಟುಂಬದವರು, ಬಂಧುಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.



ಜೂನ್ ೧೪ ರಂದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತುಮಕೂರು ಜಿಲ್ಲಾ ಘಟಕ, ಜಿಲ್ಲಾ ಕದಳಿ ಮಹಿಳಾ ವೇದಿಕೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ 'ಬಸವೇಶ್ವರ ಜಯಂತಿ ಹಾಗೂ ವಚನ ಸಾಹಿತ್ಯ ವಿಚಾರ ಸಂಕಿರಣ' ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ತುಮಕೂರು ನಗರ ಶಾಸಕ ಶ್ರೀ ಜಿ.ಬಿ.ಜ್ಯೋತಿಗಣೇಶ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಡಾ.ಸಿ.ಸೋಮಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶ್ರೀ ಕೆ.ಎಸ್.ಸಿದ್ಧಲಿಂಗಪ್ಪ ಹಾಗೂ ಕದಳಿ ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.





## ಚಿಂತನೆ

# ಮನಸ್ಸು

ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು *

'ಮನಯೇವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ' ಎಂಬ ಉಪನಿಷತ್ಕಾರರ ಮಾತನ್ನು ನಾವುಗಳು ಪದೇ ಪದೇ ಉದಹರಿಸುವುದುಂಟು. ಪ್ರತಿಯೊಬ್ಬ ಮನುಷ್ಯನು ಒಂದಿಲ್ಲೊಂದು ಹಂತದಲ್ಲಿ ಮನಸ್ಸಿನ ತಳಮಳವನ್ನನುಭವಿಸುವ ಜೊತೆಗೆ ಚಿಂತಾಕ್ರಾಂತನಾಗಿರುತ್ತಾನೆ. ಅದಕ್ಕಾಗಿ ಶರಣರು ಮನಸ್ಸನ್ನು ಮರ್ಕಟನಿಗೆ ಹೋಲಿಸಿರುವುದನ್ನು ನಾವು ಕಾಣುತ್ತೇವೆ. ಓರ್ವ ಸಂತ ಮನಸ್ಸನ್ನು ನಾಯಿಮರಿಗೆ ಹೋಲಿಕೆ ಮಾಡುತ್ತಾರೆ. ನಾವು ಸಾಕಿದ ನಾಯಿಮರಿ ಕೂಡ ಕುಣಿದ ಕುಪ್ಪಳಿಸಿ ನಮ್ಮ ಸುತ್ತು ಪ್ರದಕ್ಷಿಣೆ ಹಾಕಿ ಕೊನೆಗೆ ನಮ್ಮ ಕಾಲ ಬಳಿ ತೆಪ್ಪಗೆ ಬಂದು ಮಲಗುತ್ತದೆ. ಆಗ ಅದು ನಮಗೆ ಶರಣು ಹೋಗಿರುತ್ತದೆ. ಮನಸ್ಸು ಕೂಡ ಹಾಗೆಯೇ. ಅದು ಕುಣಿದು, ಓಡಿ ಹಾರಾಡಲು ಬಿಡಿ. ನಂತರ ಮನಸ್ಸು ಓಡುತ್ತಿರುವ ದಿಕ್ಕನ್ನು ಬದಲಾಯಿಸಲು ಪ್ರಯತ್ನಿಸಿ. ಆತ್ಮಚೈತನ್ಯವು ನಮ್ಮ ಹೃದಯದಲ್ಲಿ ಬೆಳಗುತ್ತಿರುವುದರಿಂದಲೇ ನಮ್ಮ ಮನಸ್ಸು ಎಲ್ಲದರಲ್ಲಿಯೂ ಪ್ರವೃತ್ತವಾಗುತ್ತದೆ ಎಂಬುದನ್ನು ಗಮನದಲ್ಲಿಡಬೇಕು. ವಿಜಯದ ಆಸೆ, ಭೋಗವಸ್ತುಗಳ ಸಂಗ್ರಹಣೆ, ಇಂದ್ರಿಯ ಲೋಲುಪತೆ, ಲೋಕ ವಿಷಯಗಳಲ್ಲಿ ಮಮತೆ, ಇವೆಲ್ಲವೂ ನಮ್ಮ ಅಹಂಕಾರದ ಕ್ರಿಯೆಗಳು. ಇವನ್ನು ಅಷ್ಟು ಸುಲಭವಾಗಿ ಹೋಗಲಾಡಿಸಲು ಸಾಧ್ಯವಿಲ್ಲ. ಬೆಳಗಾಗುವುದರಲ್ಲಿ ಇವು ಮಾಯವಾಗುವಂತಹವೂ ಅಲ್ಲ. ಹಳೆಯ ಅಭ್ಯಾಸದಿಂದ ಮನಸ್ಸು ಮಾಡುವ ತಪ್ಪುಗಳನ್ನು ನೋಡಿ, ಮರುಗಿ, ಅದನ್ನು ಮನ್ನಿಸಿ, ಪರಮಾತ್ಮನ ಕಡೆಗೆ ಮನಸ್ಸನ್ನು ಸಾಧ್ಯವಾದಷ್ಟು ತಿರುಗಿಸಬೇಕು. ಅವನ ಅನುಗ್ರಹದಿಂದ ಎಲ್ಲವೂ ಸುಲಭವಾಗುವುದು.

ನಮ್ಮ ಅಹಂಕಾರ ಅಡಗಿದಂತೆಲ್ಲಾ ಮನಸ್ಸಿನ ಸ್ಥೈರ್ಯ ಹೆಚ್ಚುವುದು. ನೆಮ್ಮದಿಯೂ ದೊರಕುವುದು. ದೇಹ, ಮನಸ್ಸು, ಬುದ್ಧಿ ನಮ್ಮ ಹಿಡಿತಕ್ಕೊಳಪಡುವುವು.

ನಮ್ಮ ಜೀವನಕ್ಕೆ ಅಪರಿಚಿತವಾದವರು ಯಾರೂ ಇಲ್ಲ. ನಮ್ಮ ನಿತ್ಯ ಜೀವನದಲ್ಲಿ ಅಳು–ನಗು, ಕಷ್ಟ–ಸುಖ, ಆಶೆ–ನಿರಾಶೆ, ಇಷ್ಟ–ಅನಿಷ್ಟ, ಸೋಲು–ಗೆಲುವು, ಮಾನ– ಅಪಮಾನ, ಲಾಭ–ನಷ್ಟ ಇವು ಎಲ್ಲರ ಅನುಭವಕ್ಕೂ ಬಂದಿರುವಂತಹುದೆ. ಆದರೆ ಇವು ಎಲ್ಲರಿಗೂ ಒಂದೇ ಸಮನಾಗಿಲ್ಲದಿದ್ದರೂ ಜೀವನ ಮಾತ್ರ ಎಲ್ಲರಿಗೂ ಸಾಮಾನ್ಯ. ಜೀವನವು ಸರ್ವರಿಗೂ ನಿಕಟವಾದ ಅನುಭವಾಗಿರುವುದು ನಿಜ. ಆದರೂ ನಮ್ಮಲ್ಲಿ ಎಷ್ಟು ಮಂದಿ ಜೀವನದ ಅರ್ಥವನ್ನು ಸ್ಪಷ್ಟವಾಗಿ ತಿಳಿದಿದ್ದೇವೆ? ಜೀವನವೇನೆಂದು ತಿಳಿಯದೆ ನಾವು ಲೋಕದಲ್ಲಿ ಜೀವನ ನಡೆಸುತ್ತಿದ್ದೇವೆ ಎನಿಸುತ್ತದೆ. "ಅನುಭವದ ಅಂಶಗಳಿಂದಲೇ ಜೀವನವು ರೂಪಿಸಲ್ಪಡುತ್ತದೆ. ಅನುಭವವನ್ನು ವಿಶ್ಲೇಷಿದರೆ ಅದರಲ್ಲಿ ಮೂರು ಅಂಶಗಳು ಕಂಡುಬರುತ್ತವೆ. ಅನುಭವವನ್ನು ಪಡೆಯುವ ಅನುಭವಿ; ಅನುಭವಕ್ಕೆ ಒಳಪಡುವ ವಿಷಯ; ಇವೆರಡರ ಸಂಬಂಧವಾದ 'ತಿಳಿವು'; ಈ ತಿಳಿವೇ ಅನುಭವ. ಅನುಭವವುಂಟಾಗುವುದು ಜಡವಾದ ದೇಹಕ್ಕಲ್ಲ, ಮನಸ್ಸಿಗೆ. ಆತ್ಮನಿಂದ ಚೈತನ್ಯ ಪಡೆದುಕೊಂಡಿರುವ ಮನಸ್ಸೇ 'ಅನುಭವಿ'.

**ಚಿಂತನ ಚೇತನ ಚೆಲುವಿನ ಹೂವರಳಿಸೆ**
**ಮನಸಿಗೆ ಅನುಭವ ನೀಡುವ ಆತ್ಮದ ಭಾಷೆ**

---

* ಪೀಠಾಧ್ಯಕ್ಷರು, ಅರಮೇರಿ ಮಠ, ಕೊಡಗು ಜಿಲ್ಲೆ

ವರದಿ

# ರಾಜ್ಯಮಟ್ಟದ NMMS ವಿದ್ಯಾರ್ಥಿ ವೇತನಕ್ಕೆ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಶಿವನಹಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಆಯ್ಕೆ



ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಂಯುಕ್ತ ಸಹಯೋಗದಲ್ಲಿ ಪ್ರತಿವರ್ಷ ೮ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸುವ ರಾಷ್ಟ್ರೀಯ ವಿದ್ಯಾರ್ಥಿ ವೇತನಕ್ಕೆ ನಡೆದ ೨೦೨೫-೨೬ನೇ ಸಾಲಿನಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಬೆಂಗಳೂರಿನ ಶಿವನಗರದ ಶ್ರೀ ಸಿದ್ಧಗಂಗಾ ಪ್ರೌಢಶಾಲೆಯ ೧೧ ವಿದ್ಯಾರ್ಥಿಗಳು ನಿಗದಿತ ಅಂಕಗಳಿಗಿಂತ ಹೆಚ್ಚು ಅಂಕಗಳನ್ನು ಗಳಿಸಿದ ಸೂರ್ಯಪ್ರಕಾಶ್, ಭುವನೇಶ್ವರಿ, ಆಕಾಶ್, ಸುಚಿತ್, ಬಸವರಾಜ, ರಮ್ಯ, ಜವೇರಿಯಾ, ಶರಣ ಬಸಪ್ಪ, ಸಂಧ್ಯಾ, ತನಿಷ್ಕ, ದಿಲೀಪ್ ಎಂಬ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಅರ್ಹತೆಯನ್ನು ಪಡೆದು ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ಹಾಗೂ ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಶಾಲೆಯ ಮುಖ್ಯ ಶಿಕ್ಷಕರಾಗಿದ್ದ ಶ್ರೀ ಬಿ.ಆರ್.ಸದಾಶಿವಯ್ಯ ಅವರಿಗೆ ವಿದ್ಯಾರ್ಥಿಗಳ ಬಗ್ಗೆ ಇದ್ದ ಬದ್ಧತೆ, ಕಳಕಳಿ, ಅವರ ಭವಿಷ್ಯವನ್ನು ರೂಪಿಸಬೇಕೆಂಬ ಆಶಯ ಹಾಗೂ ಪ್ರಾಮಾಣಿಕ ಪರಿಶ್ರಮದಿಂದ ಮಾರ್ಗದರ್ಶನ ನೀಡಿ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ೪೦ ವಿದ್ಯಾರ್ಥಿಗಳು ಆಯ್ಕೆಯಾಗುವಂತೆ ಮಾಡಿದ್ದಾರೆ ಎಂದು ಹೇಳಲು ಅಭಿಮಾನವೆನಿಸುತ್ತದೆ.

ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ೮ನೇ ತರಗತಿ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆದಿರುತ್ತಾರೆ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ೧.೫ ಲಕ್ಷ ರೂ.ಗಳು ಮೀರಿರಬಾರದು. ಹಾಗೂ ಏಳನೇ ತರಗತಿಯಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ. ೫೫ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಶೇ. ೫೦ ಅಂಕಗಳನ್ನು ಪಡೆದಿರಬೇಕು. ಈ ಪರೀಕ್ಷೆಯಲ್ಲಿ ಆಯ್ಕೆಯಾದ ಅರ್ಹ ವಿದ್ಯಾರ್ಥಿಗಳಿಗೆ ತಿಂಗಳಿಗೆ ೧೦೦೦/- ರೂ.ಗಳಂತೆ ೯, ೧೦, ೧೧ ಹಾಗೂ ೧೨ನೇ ತರಗತಿಯವರೆಗೆ ಒಟ್ಟು ನಾಲ್ಕು ವರ್ಷಗಳು ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ.

ಜೂನ್ ೧೪ ರಂದು, ಬೆಂಗಳೂರಿನ ಶಿವನಗರದಲ್ಲಿರುವ ಶ್ರೀ ಸಿದ್ಧಗಂಗಾ ಕನ್ನಡ ಪ್ರೌಢಶಾಲೆಯ ಶ್ರೀ ಬಿ.ಆರ್.ಸದಾಶಿವಯ್ಯ ಅವರ ಹಿರಿಯ ವಿದ್ಯಾರ್ಥಿಯಾದ ಶ್ರೀ ವಿನೋದಕುಮಾರ್ ಹಾಗೂ ಅವರ ಕುಟುಂಬ

೨೦೨೫-೨೬ನೇ ಸಾಲಿನಲ್ಲಿ NMMS ಪರೀಕ್ಷೆಯಲ್ಲಿ ಆಯ್ಕೆಯಾದ ೧೧ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿದ ಶ್ರೀ ವಿನೋದಕುಮಾರ್ ಮಾತನಾಡಿ "ನನ್ನ ವಿದ್ಯಾ ಗುರುಗಳು ಹಾಗೂ ಮುಖ್ಯ ಶಿಕ್ಷಕರಾಗಿ ಅನುಪಮ ಸೇವೆ ಸಲ್ಲಿಸಿದ ಶ್ರೀ ಬಿ.ಆರ್.ಸದಾಶಿವಯ್ಯ ಅವರ ಪ್ರಾಮಾಣಿಕ ಪರಿಶ್ರಮಕ್ಕೆ ದೊರೆತ ಫಲ" ಎಂದು ಮುಕ್ತಕಂಠದಿಂದ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಶಿವಕುಮಾರ ಅವರು "ಈ ವಿದ್ಯಾರ್ಥಿಗಳ ಸಾಧನೆಗೆ ಮುಖ್ಯ ಶಿಕ್ಷಕರಾಗಿದ್ದ ಶ್ರೀ ಬಿ.ಆರ್.ಸದಾಶಿವಯ್ಯ ಅವರ ಬದ್ಧತೆ, ಮಾರ್ಗದರ್ಶನ ಕಾರಣ. ಅವರ ಸೇವೆ ಪ್ರಸ್ತುತ ತುಂಬಾ ಅಗತ್ಯವಾಗಿದೆ. ಆಡಳಿತ ಮಂಡಳಿ ಹಾಗೂ ಶಾಲೆಗೆ ಅಭಿಮಾನದ ವಿಷಯವಾಗಿದೆ. ೮ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರೆ ಅವರ ಭವಿಷ್ಯ ಉಜ್ವಲವಾಗುತ್ತದೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

**ವರದಿ: ಜಿ.ಎಸ್.ಚಂದ್ರಶೇಖರಯ್ಯ, ಶಿಕ್ಷಕರು, ಶಿವನಹಳ್ಳಿ**

---




ಜೂನ್ ೧೩ ರಂದು, ಕೊಡಗು ಜಿಲ್ಲೆಯ ವೀರಶೈವ ಲಿಂಗಾಯತ ಸಮಾಜ ಮತ್ತು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಯುವ ಘಟಕದ ಸಂಯುಕ್ತಾಶ್ರಯದಲ್ಲಿ ಶನಿವಾರಸಂತೆಯ ಗುಡುಗಳಲೆಯಲ್ಲಿ ಏರ್ಪಡಿಸಲಾಗಿದ್ದ 'ಬಸವ ಜಯಂತಿ, ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಜಯಂತಿ, ಶ್ರೀ ರೇಣುಕಾಚಾರ್ಯ ಜಯಂತಿ, ಹಾವೇರಿ ಅರಸರ ಮತ್ತು ಸ್ವಾತಂತ್ರ್ಯ ಹೋರಾಟಗಾರ ಹೆಮ್ಮನೆ ಶ್ರೀ ಪುಟ್ಟಬಸಪ್ಪನವರ ಸಂಸ್ಮರಣೋತ್ಸವ ಸಮಾರಂಭವು ಶ್ರೀ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು, ಮನೆಹಳ್ಳಿ ಮಠದ ಪೂಜ್ಯ ಶ್ರೀ ಮಹಾಂತ ಶಿವಲಿಂಗ ಸ್ವಾಮಿಗಳು, ವೀರರಾಜಪೇಟೆಯ ಅರಮೇರಿ ಕಳಂಚೇರಿ ಮಠದ ಪೂಜ್ಯ ಶ್ರೀ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಕಲ್ಮಠದ ಪೂಜ್ಯ ಶ್ರೀ ಶ್ರೀ ಮಹಾಂತ ಸ್ವಾಮಿಗಳೂ, ಕಿರಿಕೊಡ್ಲಿಮಠದ ಪೂಜ್ಯ ಶ್ರೀ ಶ್ರೀ ಸದಾಶಿವ ಸ್ವಾಮಿಗಳು, ಸಿಡಿಗಳಲೆ ಮಠದ ಪೂಜ್ಯ ಶ್ರೀ ಶ್ರೀ ಇಮ್ಮಡಿ ಶಿವಲಿಂಗ ಸ್ವಾಮಿಗಳು ಹಾಗೂ ಹರಗುರು ಚರಮೂರ್ತಿಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆಯಿತು.

## ಕ್ಷೇತ್ರವಾರ್ತೆ

# ಶಿವತತ್ತ್ವ ಚಿಂತನಾಗೋಷ್ಠಿ-೩೫

ಮೇ ೩೧ ರಂದು, 'ಶಿವತತ್ತ್ವ ಚಿಂತನಾ ಗೋಷ್ಠಿ' ಯ ೩೫ನೇ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಶ್ರೀಹಳೇಮಠದಲ್ಲಿ ಆಚರಿಸಲಾಯಿತು. ಇದರ ಅಂಗವಾಗಿ ಶಿವಶರಣರ ವಿಚಾರ ಧಾರೆಗಳನ್ನು ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಮುಂದುವರೆಸಲಾಯಿತು.



ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಾಶೀರ್ವಾದದೊಂದಿಗೆ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರು ಹಾಗೂ ವಿವಿಧ ಮಠಗಳ ಹರಗುರು ಚರಮೂರ್ತಿಗಳು ದೀಪಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಗೋಷ್ಠಿಯಲ್ಲಿ "ಆಧುನಿಕ ಜೀವನಕ್ಕೆ ವಚನಕಾರರ ಸಂದೇಶ" ಎಂಬ ವಿಷಯವನ್ನು ಕುರಿತು, ತುಮಕೂರಿನ ಮಹಿಳಾ ಬಸವಕೇಂದ್ರದ ಅಧ್ಯಕ್ಷರಾದ ಶರಣೆ ಶ್ರೀಮತಿ ಕಲ್ಪನಾ ಉಮೇಶ್ ಅವರು ತಮ್ಮ ಉಪನ್ಯಾಸದಲ್ಲಿ "ನಾವು ಆಧುನಿಕ ಜೀವನಕ್ಕೆ ಮಾರುಹೋಗಿ ಹಲವು ರೀತಿಯ ಒತ್ತಡ, ಖಿನ್ನತೆ, ಅಹಂಭಾವಗಳಿಂದ ಬಳಲುತ್ತಿದ್ದೇವೆ. ಶರಣರ ಕಾಯಕ ದಾಸೋಹ ತತ್ತ್ವಗಳು, ಇಷ್ಟಲಿಂಗದ ಉಪಾಸನೆ, ನಡೆ ನುಡಿಗಳೊಂದಾದ ಬದುಕು, ಎಲ್ಲರನ್ನೂ ನಮ್ಮವರೆಂದು ಭಾವಿಸುವುದು, ಪ್ರತಿಯೊಬ್ಬರೂ, ಪ್ರತೀ ವಸ್ತುವೂ, ಪ್ರತೀ ಕೆಲಸವೂ ಶಿವನ ಪ್ರಸಾದವೆಂಬ ಭಾವನೆ, ಕೃತಜ್ಞತಾಭಾವ ಮುಂತಾದ ಶರಣರ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ನೆಮ್ಮದಿ ಹಾಗೂ ಶಾಂತಿಯುತವಾದ ಬದುಕನ್ನು ಸಾಗಿಸಬಹುದು" ಎಂದು ಹೇಳಿದರು.

ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರು ತಮ್ಮ ತಿಂಗಳ ಬೆಳಕಿನ ನುಡಿಯಲ್ಲಿ, ಶರಣ ಮೋಳಿಗೆ ಮಾರಯ್ಯನವರ ವಚನವನ್ನು ನಿರ್ವಚನ ಮಾಡಿ ಅವರ ಶಿವಬದುಕನ್ನು ಪರಿಚಯ ಮಾಡಿಕೊಟ್ಟರು.

ನಿವೃತ್ತ ಮುಖ್ಯಶಿಕ್ಷಕರಾದ ಶ್ರೀ ಜಿ.ಗವಿಸಿದ್ಧಯ್ಯನವರು ಪ್ರಾರ್ಥನೆ ಸಲ್ಲಿಸಿದರು. ನಂಜನಗೂಡು ಶರಣಸಂಗಮ ಮಠದ ಪೂಜ್ಯ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು ಸ್ವಾಗತಿಸಿದರು. ಗುಮ್ಮಸಂದ್ರದ ರುದ್ರಮುನೀಶ್ವರ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಓಂಕಾರಸ್ವಾಮಿಗಳು ವಚನಾರ್ಥ ಚಿಂತನೆ ನಡೆಸಿಕೊಟ್ಟರು. ವಿದ್ಯಾರ್ಥಿಗಳಾದ ಕುಮಾರಿ ಮುಕ್ತಾಯಕ್ಕ ಮತ್ತು ತೇಜಸ್ ಅವರು ವಚನ ಪಠಣ ನಡೆಸಿಕೊಟ್ಟರು. ನಿರಚನಹಳ್ಳಿ ಅಂಬಲಿಮಠದ ಪೂಜ್ಯ ಶ್ರೀ ಶ್ರೀ ಜಯಕುಮಾರ ಸ್ವಾಮಿಗಳು ಶರಣು ಸಮರ್ಪಣೆ ಮಾಡಿದರು. ಮುಖ್ಯ ಶಿಕ್ಷಕರಾದ ಎಸ್.ಪಿ.ಸಿದ್ಧಲಿಂಗಸ್ವಾಮಿ ಅವರು ಕಾರ್ಯಕ್ರಮ ನಿರೂಪಿಸಿದರು.

ಹಿರಿಯ ವಿದ್ವಾಂಸರಾದ ಶ್ರೀ ಕೋರಂಬ, ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತುಮಕೂರು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಜಿಲ್ಲಾ ಮಹಿಳಾ ಬಸವಕೇಂದ್ರ, ಕದಳಿ ವೇದಿಕೆ ತುಮಕೂರು ಈ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ತುಮಕೂರು ನಗರದ ಅಭಿಮಾನಿಗಳು, ಶ್ರೀಮಠದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು.

ವರದಿ: ಎಸ್.ಪಿ.ಸಿದ್ಧಲಿಂಗಸ್ವಾಮಿ







## ದಾನಿಗಳ ಪಟ್ಟಿ

**ಶ್ರೀ ಸಿದ್ಧಗಂಗಾ ಮಠ, ತುಮಕೂರು**

**ಶ್ರೀ ಸಿದ್ಧಗಂಗಾಮಠದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸಮಗ್ರ ಯೋಜನೆಗೆ ಶ್ರೀ ಸಿದ್ಧಗಂಗಾ ಗುರುಕುಲ ಡೆವಲಪ್‌ಮೆಂಟ್ ಟ್ರಸ್ಟ್‌ಗೆ ದೇಣಿಗೆ ನೀಡಿದ ದಾನಿಗಳ ಪಟ್ಟಿ ತಾವು ನೀಡುವ ಹಣಕ್ಕೆ ಆದಾಯ ತೆರಿಗೆ ಇಲಾಖೆಯಿಂದ ೮೦ಜಿ ಅಡಿಯಲ್ಲಿ ಶೇ. ೫೦ರವರೆಗೆ ತೆರಿಗೆ ವಿನಾಯಿತಿ ಇರುತ್ತದೆ.**

| ಕ್ರ.ಸಂ. | ಹೆಸರು ಮತ್ತು ಊರು | ಮೊತ್ತ |
|---|---|---|
| ೧. | ಶ್ರೀ ಹನುಮಂತ<br>ರಾಯಚೂರು | ೧,೦೦೧ |
| ೨. | ಶ್ರೀ ಗುರುಶಾಂತಣ್ಣ ಶೆಟ್ಟಿ<br>ಬ್ಯಾಗವಾಟ | ೫,೦೦೦ |
| ೩. | ಶ್ರೀ ರವಿಕುಮಾರ ಬಲ್ಲಟಗಿ<br>ಮಾನ್ವಿ | ೨,೦೦೦ |
| ೪. | ಶ್ರೀ ವೆಂಕಟೇಶ ಶೆಟ್ಟಿ ಬಲ್ಲಟಗಿ<br>ಮಾನ್ವಿ | ೨,೦೦೦ |
| ೫. | ಶ್ರೀ ಟಿ ಮುನಿಕಾಯ ಶೆಟ್ಟಿ<br>ಬ್ಯಾಗವಾಟ | ೨,೦೦೦ |
| ೬. | ಶ್ರೀ ಟಿ ಯೆಂಕಟೇಶ<br>ಬ್ಯಾಗವಾಟ | ೩,೦೦೦ |
| ೭. | ಶ್ರೀ ಹನುಮಂತ<br>ರಾಯಚೂರು | ೧,೦೦೧ |
| ೮. | ಶ್ರೀ ಜಿ ಹನುಮಂತನಗೌಡ<br>ಮಾನ್ವಿ | ೨,೦೦೧ |
| ೯. | ಶ್ರೀ ಬೀಮೇಶಪ್ಪ<br>ಮಾನ್ವಿ | ೨,೦೦೧ |
| ೧೦. | ಶ್ರೀ ಬಾಳಪ್ಪ ಖ/ಠ ಗುಂಡಪ್ಪ<br>ಮಾನ್ವಿ | ೨,೦೦೧ |
| ೧೧. | ಡಾ॥ ಹನುಮೇಶ ನಾಯಕ<br>ರಾಯಚೂರು | ೨,೦೦೧ |
| ೧೨. | ಶ್ರೀ ಟಿ. ಹರ್ಷ<br>ರಾಯಚೂರು | ೨,೦೦೧ |
| ೧೩. | ಶ್ರೀಮತಿ ಅನುಸೂಯ<br>ಲಿಂಗಸಗೂರು | ೨,೦೦೦ |
| ೧೪. | ಶ್ರೀ ಬಸವನಗೌಡ<br>ರಾಯಚೂರು | ೧೦,೧೦೦ |
| ೧೫. | ಶ್ರೀ ಟಿ. ವೆಂಕಟೇಶ ಶೆಟ್ಟಿ<br>ಮಾನ್ವಿ | ೨,೦೦೦ |
| ೧೬. | ಶ್ರೀ ರವಿಕುಮಾರ ಬಲ್ಲಟಗಿ<br>ರಾಯಚೂರು | ೨,೦೦೦ |
| ೧೭. | ಶ್ರೀ ಹನುಮಂತಿ<br>ಮಾನ್ವಿ | ೧,೦೦೧ |
| ೧೮. | ಶ್ರೀ ಹನುಮಂತಗೌಡ<br>ಮಾನ್ವಿ | ೨,೦೦೦ |
| ೧೯. | ಶ್ರೀ ಬೀಮೇಶಪ್ಪ<br>ಮಾನ್ವಿ | ೨,೦೦೦ |
| ೨೦. | ಶ್ರೀ ಬಾಳಪ್ಪ<br>ಮಾನ್ವಿ | ೨,೦೦೦ |
| ೨೧. | ಶ್ರೀ ಹನುಮೇಶ ನಾಯಕ್<br>ಮಾನ್ವಿ | ೨,೦೦೦ |
| ೨೨. | ಶ್ರೀ ಟಿ. ಯಂಕಯ್ಯಶೆಟ್ಟಿ<br>ಬ್ಯಾಗವಾಟ | ೨,೦೦೦ |
| ೨೩. | ಶ್ರೀ ಯಂಕಟೇಶ ಬಲ್ಲಟಗಿ<br>ಮಾನ್ವಿ | ೨,೦೦೦ |
| ೨೪. | ಶ್ರೀ ರವಿಕುಮಾರ ಬಲ್ಲಟಗಿ<br>ಮಾನ್ವಿ | ೨,೦೦೦ |
| ೨೫. | ಶ್ರೀ ಬಸವನಗೌಡ ಕೆಳಗೆಟು<br>ಮಾನ್ವಿ | ೨,೦೦೦ |
| ೨೬. | ಶ್ರೀ ವಿಜಯಕುಮಾರ್ ಕೆ.ಆರ್.<br>ದಾವಣಗೆರೆ | ೭೪,೦೦೦ |
| ೨೭. | ಶ್ರೀ ಎ.ಎಂ. ಸಿದ್ಧಗಂಗಯ್ಯ<br>ಪುರುಷನಹಳ್ಳಿ | ೧,೦೦೦ |
| ೨೮. | ಶ್ರೀ ಆರ್. ಹೊನ್ನಗಂಗಯ್ಯ<br>ಕಾಳೇರಿ | ೧೦,೦೦೦ |
| ೨೯. | ಶ್ರೀ ಸಿದ್ಧರೇವಯ್ಯ<br>ಬೆಂಗಳೂರು | ೫,೦೦೦ |
| ೩೦. | ಶ್ರೀಮತಿ ಬಿ.ಸಿ. ಪುಷ್ಪಾವತಿ<br>ಬೆಂಗಳೂರು | ೧,೦೦೦ |
| ೩೧. | ಶ್ರೀ ಟಿ. ಲಕ್ಷ್ಮೀನಾರಾಯಣ<br>ಬೆಂಗಳೂರು | ೨,೦೦೦ |
| ೩೨. | ಶ್ರೀ ಎನ್. ಬಸಪ್ಪ<br>ಕರೂರು, ಬಳ್ಳಾರಿ ಜಿಲ್ಲೆ. | ೪,೦೦೦ |
| ೩೩. | ಶ್ರೀ ಕೆ. ನಾಗರಾಜ್<br>ಬೆಂಗಳೂರು | ೧೦,೦೦೦ |
| ೩೪. | ಶ್ರೀ ಕಮಾಂಡರ್ ರಾಜೇಶ್ ಹೆಚ್.ಎಸ್. ನಾಯಕ್<br>ಕರೂರು, ಬಳ್ಳಾರಿ ಜಿಲ್ಲೆ | ೨೦,೦೦೦ |
| ೩೫. | ಶ್ರೀ ಕಾಳೇಗೌಡ<br>ಮಂಡ್ಯ ನಗರ | ೨,೦೦೦ |

*(ಮುಂದುವರಿಯುವುದು)*

ಸ್ಥಾಪನೆ : 1995

ಶುಭಾಶಯಗಳೊಂದಿಗೆ

ಭಾರತೀಯ ರಿಸರ್ವ್ ಬ್ಯಾಂಕ್ ಲೈಸೆನ್ಸ್ ಪುರಸ್ಕೃತ

ದೂರವಾಣಿ : 2277267

ಫ್ಯಾಕ್ಸ್ : 2277267

# ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಬಿ.ಹೆಚ್.ರಸ್ತೆ, ತುಮಕೂರು-572 102

## ಪ್ರಗತಿ ನೋಟ (31.03.2025ರಲ್ಲಿದ್ದಂತೆ) ಮತ್ತು ಠೇವಣಿಗಳು (ಲಕ್ಷರೂ.ಗಳಲ್ಲಿ)

| | | | |
|---|---|---|---|
| ಸದಸ್ಯರ ಸಂಖ್ಯೆ | 4228 | ಸಾಲಗಳು | 15010.80 |
| ಪಾವತಿಯಾದ ಷೇರು ಬಂಡವಾಳ | 729.80 | ಹೂಡಿಕೆಗಳು | 9223.42 |
| ಆಪದ್ಧನ ಮತ್ತು ನಿಧಿಗಳು | 4980.66 | ದುಡಿಯುವ ಬಂಡವಾಳ | 26116.68 |
| ಠೇವಣಿಗಳು | 20406.21 | ನಿವ್ವಳ ಲಾಭ (ತೆರಿಗೆ ನಂತರ) | 307.34 |

## ಠೇವಣಿ ಮೇಲಿನ ಬಡ್ಡಿ ದರಗಳು

| | | | |
|---|---|---|---|
| 46 ದಿವಸಗಳಿಂದ 90 ದಿವಸಗಳವರೆಗೆ | - ಶೇ. 4% | 181 ದಿವಸಗಳಿಂದ 365 ದಿವಸಗಳವರೆಗೆ | - ಶೇ. 6% |
| 91 ದಿವಸಗಳಿಂದ 180 ದಿವಸಗಳವರೆಗೆ | - ಶೇ. 5% | 1 ವರ್ಷ ಮೇಲ್ಪಟ್ಟು | - ಶೇ. 7.5% |

ಹಿರಿಯ ನಾಗರಿಕರಿಗೆ,

ಒಂದು ವರ್ಷ ಮೇಲ್ಪಟ್ಟ ಠೇವಣಿಗಳ ಮೇಲೆ 1/2 % ಅಧಿಕ ಬಡ್ಡಿ ದರವನ್ನು ಅವರ ಠೇವಣಿಗಳ ಮೇಲೆ ನೀಡಲಾಗುವುದು.

ಐದು ಲಕ್ಷದ ವರೆಗಿನ ಠೇವಣಿಗಳ ಮೇಲೆ ವಿಮಾ ರಕ್ಷಣೆ ಇದೆ.(ಡಿ.ಐ.ಸಿ.ಜಿ.ಸಿ)

ಜಂಟಿ ಸಾಲ, ಗೃಹ ನಿರ್ಮಾಣ ಸಾಲ, ಆಸ್ತಿ ಅಡಮಾನ ಸಾಲ, ಹೊಸ/ಹಳೆಯ ವಾಹನಾಧಾರ ಸಾಲ, ಯಂತ್ರೋಪಕರಣ ಸಾಲ, ವಸ್ತು ಬಳಕೆದಾರ ಸಾಲ, ಮೀರೆಳೆತ, ವೇತನಾಧಾರ, ಚಿನ್ನಾಭರಣ ಸಾಲಗಳಿಗೆ ಬಡ್ಡಿ ದರ ಶೇ.11 ರಿಂದ 14.

## ಶಾಖೆಗಳು :

ಸಿದ್ದಗಂಗಾ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್ ಲಿ.,
ಸಿದ್ದಗಂಗಾ ಕಾಲೇಜ್ ಕ್ಯಾಂಪಸ್, ಗಾಂಧಿನಗರ
ಬಿ.ಹೆಚ್,ರಸ್ತೆ, ತುಮಕೂರು-572 101
ಫೋನ್ : 0816-2277273

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡ್ ರಸ್ತೆ,
ಒಕ್ಕಲಿಗರ ಸಮುದಾಯ ಭವನದ ಎದುರು
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಫೋನ್ : 080-29900052

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಹಾಸ್ಪಿಟಲ್ ರಸ್ತೆ, ದಾಬಸಪೇಟೆ (ಸೋಂಪುರ)
ನೆಲಮಂಗಲ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್ : 080-27735409

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ವಿಜಯನಗರ ಶಾಖೆ. 27/1, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ವಿಜಯನಗರ, ಬೆಂಗಳೂರು- 560 040
ಫೋನ್ : 080-23301270

ಶ್ರೀ ಟಿ.ಕೆ. ನಂಜುಂಡಪ್ಪ
ಅಧ್ಯಕ್ಷರು

ಶ್ರೀ ಕೆ.ಎಸ್. ಶಂಕರಯ್ಯ
ಉಪಾಧ್ಯಕ್ಷರು

ನಿರ್ದೇಶಕರು

| | | |
|---|---|---|
| ಶ್ರೀ ಮಹೇಶಪ್ಪ | ಶ್ರೀ ಬಿ.ಎಸ್. ರುದ್ರೇಶಯ್ಯ | ಶ್ರೀ ಎಸ್. ವಿಶ್ವನಾಥ್, CA |
| ಡಾ॥ ಆರ್.ಸಿ. ಪುಟ್ಟಬುದ್ದಿ | ಶ್ರೀ ಟಿ.ಎಮ್. ಸ್ವಾಮಿ | ಡಾ॥ ಶಿವಕುಮಾರಯ್ಯ |
| ಶ್ರೀಮತಿ ಮಂಜುಳಾ ಪ್ರಸಾದ್ | ಶ್ರೀ ರಾಮಯ್ಯ | ಡಾ॥ ರೇಣುಕಾ ಲತಾ. ಎಸ್. |
| ಡಾ. ಎಸ್. ಪರಮೇಶ್ | ಶ್ರೀ ಚಿಕ್ಕಯ್ಯ. ಆರ್. | ಶ್ರೀ ಕೆ.ಎಮ್. ಸ್ವಾಮಿ |

ವ್ಯವಸ್ಥಾಪನಾ ಮಂಡಳಿ : ಶ್ರೀ ಬಿ.ಎಸ್. ರುದ್ರೇಶಯ್ಯ, ಅಧ್ಯಕ್ಷರು
ನಿರ್ದೇಶಕರು : ಶ್ರೀ ಎಸ್.ವಿಶ್ವನಾಥ್ CA, ಶ್ರೀ ಎಸ್. ವಿಶ್ವನಾಥಯ್ಯ,
ಪ್ರೊ.ಪಿ.ಪರಮಶಿವಯ್ಯ, ಶ್ರೀ ಸಿ.ಆರ್. ರಮೇಶ್,

ಹೆಚ್.ಕೆ. ಶಿವಪ್ರಕಾಶ್
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು

"Siddaganga" Monthly - Postal Reg. No. L2/RNP/385/TMR/2024-26
Posted at RMS, Tumkur-572 102

RNI No. 17139/69




To

If undelivered please return to :
Editor
Siddaganga Monthly Magazine
Siddaganga Math
Tumkur-572 104

Cover printed at : Geetanjali Graphics, B-71, KSSIDC Indl. Area, 6th Block, Rajajinagar, Bengaluru 10. Ph : 23404232

email ID : geetanjaligraphics@gmail.com